ಧಾರವಾಡ ಜಿಲ್ಹಾ ಲೋಕಲ್ ಬೋರ್ಡಿನವರು

ಪಂಚಾಯತ ಕಾಯದೆಯ ಕಲಮು

೧೦೯ (೧) ಪ್ರಕಾರ

ಉಪನಿಯಮಗಳು.

ಲೇಖಕರು: ಜಿ. ಆರ್. ಪಾಡಗಾಂವಕರ.

ಬೆಲೆಸ್ತ್ರೆ ಆಣೆ. ೧೯೪೧

೧೯೩೩ ನೇ ಇಸ್ವಿಯ ಗ್ರಾಮಪಂಚಾಯತ ಕಾಯದೆಯ ೧೧೯ ನೇ ಕಲ್ಮಿನ ಪ್ರಕಾರ ಮಾಡಿದ ಪೋಟಕಾಯಿದೆಗಳು.

---

೧. ಪಂಚಾಯತ ಕಮೀಟಿಯು ಪ್ರತಿತಿಂಗಳ ಕನಿಷ್ಟ ಒಂದು ಸಾರೆ ಕೂಡತಕ್ಕದ್ದು.

೨. ಪಂಚಾಯತಿಯ ಸಾಧಾರಣ ಸಭೆಯು ಪ್ರತಿ ತಿಂಗಳ ಮೊದಲನೆ ವಾರದಲ್ಲಿ ಸ[illegible]ಪಂಚ[illegible]ತ್ತುಪಡಿಸಿದ ತಾರೀಖಿನ ದಿವಸ ಕೂಡತಕ್ಕದ್ದು.

೩. ಸರಪಂಚನಿಗೆ ಅವಶ್ಯ ಕಂಡಾಗ ಅಥವಾ ಪಂಚಾಯತಿಯ ಯಾವದೇ ಇಬ್ಬರು ಸಭಾಸದರು ವಿನಂತಿ ಮಾಡಿಕೊಂಡ ಅಥವಾ ಯಾವದಾದರೊಂದು ಮಹತ್ವದ ಕೆಲಸದ ಸಲುವಾಗಿ ಜಿಲ್ಹಾ ಲೋಕಲ್ ಬೋರ್ಡ ಅಧ್ಯಕ್ಷರು ಅಪ್ಪಣೆ ಮಾಡಿದ ತಾರೀಖಿನಿಂದ ಹದಿನೈದು ದಿವಸಗಳೊಳಗಾಗಿ ವಿಶಿಷ್ಟ ಸಭೆಯನ್ನು ಕರೆಯತಕ್ಕದ್ದು.

೪. ಪಂಚಾಯತೀ ಸಭೆಗಳು ಪಂಚಾಯತಿ ಆಫೀಸಿನಲ್ಲಿ ಅಥವಾ ಗ್ರಾಮದ ಚಾವಡಿಯಲ್ಲಿ ಅಥವಾ ಸಾರ್ವಜನಿಕರಿಗೆ ಬರಹೋಗಲಿಕ್ಕೆ ಆತಂಕ ಇಲ್ಲದ ಸ್ಥಳದಲ್ಲಿ ಕೂಡತಕ್ಕದ್ದು.

೫. ಸಾಧಾರಣ ಸಭೆಗೆ ನೋಟೀಸು ಹೊರಟ ತಾರೀಖು ಮತ್ತು ಮೀಟಿಂಗಿನ ದಿವಸದ ನಡುವೆ ಪೂರ್ಣ ಮೂರು ದಿವಸಗಳ ಅಂತರವಿರ

ತಕ್ಕದ್ದು. ವಿಶಿಷ್ಟ ಸಭೆಗೆ ಅದೇ ಪ್ರಕಾರ ಒಂದು ದಿವಸದ ಅಂತರವಿರ ತಕ್ಕದ್ದು. ಮೀಟಿಂಗಿನ ನೋಟೀಸಿನಲ್ಲಿ ಮೀಟಿಂಗ ಕೂಡತಕ್ಕ ವೇಳೆ, ಸ್ಥಳ ಮತ್ತು ಅಲ್ಲಿ ನೋಡತಕ್ಕ ಕೆಲಸವನ್ನು ನಮೂದಿಸತಕ್ಕದ್ದು. ಸದರ ನೋಟೀಸನ್ನು ಎಲ್ಲ ಮೆಂಬರರಿಗೂ ಕಳಿಸತಕ್ಕದ್ದು. ಮತ್ತು ಅದರ ಒಂದು ಪ್ರತಿಯನ್ನು ಪಂಚಾಯತಿ ಆಫೀಸಿನಲ್ಲಿಯೂ ಒಂದು ಪ್ರತಿಯನ್ನು ಚಾವಡಿಯಲ್ಲಿಯೂ ಹಚ್ಚತಕ್ಕದ್ದು.

೬. ಸಭೆಯಲ್ಲಿ ಸುರುವಿನಿಂದಾ ಕೊನೆಯ ವರೆಗೆ ಅರ್ಧಕ್ಕಿಂತ ಹೆಚ್ಚು ಸಭಾಸದರು ಹಾಜರ ಇಲ್ಲದೇ ಯಾವ ಕೆಲಸವನ್ನು ಮಾಡತಕ್ಕದ್ದಲ್ಲ. ಕೋರಂ ಇಲ್ಲದಿದ್ದರೆ ಅಧ್ಯಕ್ಷನು ತನಗೆ ಯೋಗ್ಯಕಂಡ ವೇಳೆಗೆ ಸಭೆಯನ್ನು ಮುಂದಕ್ಕೆ ಹಾಕತಕ್ಕದ್ದು. ಮುಂದೆ ಹಾಕಲ್ಪಟ್ಟ ಮೀಟಿಂಗಿಗೆ ಕೋರಂ ಅವಶ್ಯವಿಲ್ಲಾ. ಆದರೆ ಪಂಚಾಯತಿಯ ಯಾವತ್ತೂ ಮೆಂಬರರಿಗೆ ಸಭೆಯನ್ನು ಮುಂದೆ ಹಾಕಿದ ಬಗ್ಗೆ ನೋಟಿಸಿನಿಂದ ತಿಳಿಸ ತಕ್ಕದ್ದು. ಮೂಲ ಸಭೆಯಲ್ಲಿ ಕೋರಮು ಇದ್ದರೆ ವಿಚಾರ ಮಾಡ ಬಹುದಾಗಿದ್ದ ವಿಷಯಗಳನ್ನಷ್ಟೇ ಮುಂದೆ ಹಾಕಿದ ಮೀಟಿಂಗಿನಲ್ಲಿ ವಿಚಾರಿಸತಕ್ಕದ್ದು. ಹೊಸ ವಿಷಯಗಳನ್ನು ತರತಕ್ಕದ್ದಲ್ಲ.

೭. ಪಂಚಾಯತ ಸಭೆಯು ಎದುರಿಗಿನ ಯಾವದಾದರೊಂದು ವಿಷಯದ ವಿಚಾರ ಅಥವಾ ಚೌಕಸಿಯು ಗುಪ್ತವಾಗಿ ನಡೆಯತಕ್ಕದ್ದೆಂದು ಅಧ್ಯಕ್ಷರಿಗೆ ತೋರದಿದ್ದ ಪಕ್ಷದಲ್ಲಿ ಪಂಚಾಯತಿ ಪ್ರತಿಯೊಂದು ಮೀಟಿಂಗಿಗೆ ಸಾರ್ವಜನಿಕರಿಗೆ ಮುಕ್ತದ್ವಾರವಿರತಕ್ಕದ್ದು. ಸಭೆಯು ನಡೆದ ಕಾಲಕ್ಕೆ ಅಲ್ಲಿ ನಡೆದ ಕೆಲಸಕ್ಕೆ ಯಾರಾದರೂ ಅಡ್ಡಿ ಮಾಡಿದರೆ ಅಂಥವರನ್ನು ಅಧ್ಯಕ್ಷರು ಬೇಕಾದಾಗ ಸಭೆಯಿಂದ ಹೊರಗೆಹಾಕಬಹುದು.

೮. ಪಂಚಾಯತಿಯ ಪ್ರತಿಯೊಂದು ಮೀಟಿಂಗಿಗೆ ಸರಪಂಚನು ಅಥವಾ ಅವನ ಗೈರ ಹಾಜರಿಯಲ್ಲಿ ಡೆಪುಟಿ ಸರಪಂಚನು ಮತ್ತು ಸರ ಪಂಚ ವ ಡೆಪುಟಿ ಸರಪಂಚರಿಬ್ಬರೂ ಗೈರಹಾಜರ ಇದ್ದರೆ ಹಾಜರ ಇದ್ದ

ಮೆಂಬರರು ತಮ್ಮ ಪೈಕಿ ಒಬ್ಬನನ್ನು ಆಗಿನ ಮೀಟಿಂಗಿನ ಮಟ್ಟಿಗೆ ಚೇಅರಮನ್ನನನ್ನಾಗಿ ಆರಿಸತಕ್ಕದ್ದು.

೯. ಸಭೆಯ ಮುಂದಿನ ಯಾವತ್ತೂ ವಿಷಯುಗಳನ್ನು ಹಾಜರ ಇದ್ದ ಮೆಂಬರರ ಬಹುಮತದಿಂದ ನಿಕಾಲೆ ಮಾಡತಕ್ಕದ್ದು. ಆದರೆ ಸಮವಾಗಿ ಮತಬಿದ್ದ ಎಲ್ಲ ವಿಷಯುಗಳಲ್ಲಿ ಸಭೆಯ ಅಧ್ಯಕ್ಷನಾದ ಸರ ಪಂಚ ಡೆಪುಟಿ ಸರಪಂಚ ಅಥವಾ ಚೇಅರಮನ್ನನಿಗೆ ಒಂದು ಕಾಸ್ಟಿಂಗ ಹೋಟು ಇರುವದು.

೧೦. ಮೀಟಿಂಗಿನ ವಿಷಯುಗಳ ಚರ್ಚೆಯನ್ನು ಯಾವ ಅನುಕ್ರ ಮದಿಂದ ಸಾಗಿಸತಕ್ಕದ್ದೆಂಬದನ್ನು ಅಧ್ಯಕ್ಷರು ಠರಾಯಿಸತಕ್ಕದ್ದು. ಆದರೆ ಇಂಥ ಯಾವದಾದರೊಂದು ವಿಷಯುವನ್ನು ತೆಗೆದುಕೊಳ್ಳಬೇ ಕೆಂದು ಯಾವನಾದರೊಬ್ಬ ಮೆಂಬರನು ಸೂಚಿಸಿದರೆ ಅಧ್ಯಕ್ಷನು ಆ ಸೂಚನೆಯ ಮೇಲೆ ಮೀಟಿಂಗಿನ ಅಭಿಪ್ರಾಯ ತೆಗೆದುಕೊಂಡು ಅದರ ಪ್ರಕಾರ ಕೆಲಸ ನಡಿಸತಕ್ಕದ್ದು.

೧೧. ಅಧ್ಯಕ್ಷರ ಪರವಾನಗಿ ವಿನಾ ಮೀಟಿಂಗಿನ ನೋಟಿಸಿನಲ್ಲಿ ಇಲ್ಲದ ಯಾವ ವಿಷಯುವನ್ನು ಸಭೆಯು ವಿಚಾರಿಸತಕ್ಕದ್ದಲ್ಲ. ಮತ್ತು ಅಧ್ಯಕ್ಷನು ಪಂಚಾಯತಿಯ ಯಾವದಾದರೊಂದು ಠರಾವನ್ನು ಅದು ಆದ ಮೂರು ತಿಂಗಳೊಳಗೆ ದುರಸ್ತ ಮಾಡಲಿಕ್ಕೆ ಅಥವಾ ರದ್ದುಪಡಿಸ ಲಿಕ್ಕೆ ಪರವಾನಗಿ ಕೊಡತಕ್ಕದ್ದಲ್ಲ.

೧೨. ಅಧ್ಯಕ್ಷನು ಹಾಜರ ಇದ್ದ ಮೆಂಬರರ ಬಹುಮತದಿಂದ ಸಭೆ ಯನ್ನು ಮುಂದೆ ಹಾಕಬಹುದು. ಆದರೆ ಮುಂದೆ ಹಾಕಿದ ಮೀಟಿಂಗಿ ನಲ್ಲಿ ಮುಂದೆ ಹಾಕಲ್ಪಟ್ಟ ಸಭೆಯಲ್ಲಿ ಉಳಿದ ವಿಷಯುಗಳ ಹೊರ್ತಾಗಿ ಬೇರೆ ವಿಷಯುಗಳನ್ನು ಚರ್ಚಿಸತಕ್ಕದ್ದಲ್ಲ.

೧೩. ಪಂಚಾಯತಿಯು ಯಾವದೇ ಠರಾವನ್ನು ಅದು ಆದ ಮೂರು ತಿಂಗಳೊಳಗಾಗಿ ದುರಸ್ತ ಮಾಡುವದಾದರೆ ಅಥವಾ ರದ್ದು

ನಡಿಸುವದಾದರೆ ಪೋಟ ಕಾಯಿದೆ ೫ನೇದರ ಪ್ರಕಾರ ನೋಟೀಸ ಹೊರಡಿಸಿ ಮೀಟಿಂಗ ಕರೆದು ಪಂಚಾಯತಿಯ ಒಟ್ಟು ಮೆಂಬರರಲ್ಲಿ ಅರ್ಧಕ್ಕಿಂತ ಹೆಚ್ಚು ಮೆಂಬರರ ಬಹು ಮತದಿಂದ ಸದರ ಠರಾವ, ದುರಸ್ತಿ ಅಥವಾ ರದ್ದುಪಡಿಸತಕ್ಕದ್ದು. ಇಂಥ ಮೀಟಿಂಗದ ನೋಟೀಸಿನಲ್ಲಿ ದುರಸ್ತಿ ಮಾಡತಕ್ಕ ಅಥವಾ ರದ್ದುಪಡಿಸತಕ್ಕ ಠರಾವ, ಮತ್ತೂ ಅದರ ದುರಸ್ತಿ ಅಥವಾ ರದ್ದು ಮಾಡತಕ್ಕ ಸೂಚನೆಯನ್ನು ಪೂರ್ಣ ಕಾಣಿಸತಕ್ಕದ್ದು.

೧೪. ಪಂಚಾಯತಿಯ ಪ್ರತಿಯೊಂದು ಮೀಟಿಂಗಿನಲ್ಲಿ ನಡೆದ ವಿಷಯವನ್ನು (ಪ್ರೋಸಿಡಿಂಗ್ಸ) ದೇಶಭಾಷೆಯಲ್ಲಾಗಲೀ ಅಥವಾ ಕಲೇಕ್ಟರ ಅನುಮತಿಯಿಂದ ಇತರ ಯಾವದೇ ಭಾಷೆಯಲ್ಲಿ ಒಂದು ಬಾಯಿಂಡ ಮಾಡಿದ ಬುಕ್ಕಿನಲ್ಲಿ ಬರೆಯತಕ್ಕದ್ದು. ಈ ಬುಕ್ಕಿನಲ್ಲಿ ಪ್ರತಿಯೊಂದು ಮೀಟಿಂಗಿನಲ್ಲಿ ಹಾಜರ ಇದ್ದ ಮೆಂಬರರ ಹೆಸರು ಆದ ಠರಾವ, ಮತ್ತು ಯಾವದಾದರೊಂದು ವಿಷಯದ ಬಗ್ಗೆ ಒಮ್ಮತವಾಗದಿದ್ದರೆ ಆ ಸಂಬಂಧಿ ಬಹು ಸಂಖ್ಯಾಕರ ಮತ್ತು ಅಲ್ಪ ಸಂಖ್ಯಾಕರ ಹೆಸರುಗಳನ್ನು ಬರೆಯತಕ್ಕದ್ದು. ಮೇಲಿನ ಪ್ರಕಾರ ಬರೆದ ಪ್ರೊಸಿಡಿಂಗ್ಸಿಗೆ ಸರಪಂಚ ಡೆಪೂಟ ಸರಪಂಚ, ಅಥವಾ **ಸಭೆಗೆ ನೇಮಿಸಲ್ಪಟ್ಟ ಚೇಅರಮನ್ನ ಮತ್ತು ಹಾಜರ ಇದ್ದ ಮೆಂಬರರು ಸಹಿ ಮಾಡತಕ್ಕದ್ದು.** ಪ್ರೊಸಿಡಿಂಗ್ಸಿನ ಒಂದು ನಕಲು ಜಿಲ್ಹಾ ಲೋಕಲ್‌ಬೋರ್ಡ ಪ್ರೆಸಿಡೆಂಟರಿಗೆ ಕಳಿಸತಕ್ಕದ್ದು. ಈ ಪ್ರೊಸಿಡಿಂಗ್ಸ ಬುಕ್ಕು ಪಂಚಾಯತಿಯ ಯಾವದೇ ಮೆಂಬರನಿಗೆ ಅಥವಾ ಗ್ರಾಮದ ಯಾವದೇ ನಿವಾಸಿಗೆ ಯಾವತ್ತೂ ಯೋಗ್ಯ ವೇಳೆಗಳಲ್ಲಿ ತಪಾಸಣಿಗೆ ಮುಕ್ತದ್ವಾರ ಇರತಕ್ಕದ್ದು.

೧೫. ಸರಪಂಚನ ಗೈರಹಾಜರಿಯಲ್ಲಿ ಕೆಳಗೆ ನಮೂದಿಸಿದ ಸರಪಂಚನ ಅಧಿಕಾರ ಮತ್ತು ಕರ್ತವ್ಯಗಳನ್ನು ಡೆಪೂಟ ಸರಪಂಚನು ನಡಿಸಬಹುದು.

೧. ಪಂಚಾಯುತ ಫಂಡಿನಿಂದ ಪಂಚಾಯುತ ನೌಕರರ ಪಗಾರ ಕೊಡುವದು.

೨. ಅತ್ಯಗತ್ಯ ಪ್ರಸಂಗಗಳಲ್ಲಿ ಅವಶ್ಯ ಕಂಡ ಹಂಗಾಮಿ ನೌಕರರನ್ನು ನೇಮಿಸುವದು.

೩. ಸರಪಂಚನು ನೇಮಿಸಿದ ಯಾವನಾದರೊಬ್ಬ ಸೇವಕನನ್ನು ಸಸ್ಪೆಂಡು ಮಾಡುವದು

೪. ಪಂಚಾಯತಿಗೆ ಕರ ಅಥವಾ ಫೀ. ಕೊಡಲಿದ್ದವನಿಗೆ ಕಳಿಸತಕ್ಕ ಬಿಲ್ಲಿಗೆ ಸಹಿ ಮಾಡುವದು.

೫. ಮಾಗಣಿಯ ಲೇಖಿಗಳಿಗೆ ಸಹಿ ಮಾಡುವದು.

೬. ಪಂಚಾಯತ ನೌಕರರ ಮತ್ತು ಪಂಚಾಯುತಿಯಿಂದ ನಡೆದ ಕೆಲಸಗಳ ಮೇಲ್ವಿಚಾರಣೆ.

೭. ಪಂಚಾಯುತಿಗೆ ಬರತಕ್ಕ ಹಣ ಸ್ವೀಕರಿಸುವದು. ಮತ್ತು ಪಂಚಾಯುತಿಯ ಅಂದಾಜ ಪತ್ರಿಕೆಯಲ್ಲಿ ಕಾಣಿಸಿದ ಕೆಲಸಗಳ ಸಲುವಾಗಿ ಖರ್ಚುಮಾಡುವದು. ಮತ್ತು ಸರಕಾರದವರು ಗೊತ್ತು ಪಡಿಸಿದ ಮಾದರಿಯಲ್ಲಿ ಪಂಚಾಯತ ಲೆಖ್ಖ ಮಾಡುವದು.

೧೬. ಈ ಪೋಟ ಕಾಯದೆಯಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ಬಾಧೆ ಬರದಿದ್ದರೆ

(ಅ) ಯಾವದಾದರೊಂದು ಮನೆ ಅಥವಾ ಜಾಗೆಯ ಸಂಬಂಧದಲ್ಲಿ "ಮಾಲಿಕ" ಈ ಶಬ್ದದ ಅರ್ಥದಲ್ಲಿ ಸದರ ಮನೆ ಅಥವಾ ಜಾಗೆ ಭಾಡಿಗಿ ತಕ್ಕೊಳ್ಳುವವ ಅಥವಾ ತಕ್ಕೊಳ್ಳಲಿಕ್ಕೆ ಬಾಧ್ಯವಿದ್ದವನ ಸಮಾವೇಶವಾಗುವದು.

(ಬ) "ಭೋಗವಟಿದಾರ" ಈ ಶಬ್ದದಲ್ಲಿ ಮನೆಯ ಅಥವಾ ಜಾಗೆಯ ಹಾಲಿ ಕಬ್ಜಾದಾರನ ಸಮಾವೇಶವಾಗುವದು. ಅವನು ಮಾಲಿಕ, ಎಜಂಟ ಅಥವಾ ಭಾಡಿಗಿದಾರ ಇರಬಹುದು.

೧೭. ಕುಡಿಯುವ ಜಲಾಶಯಗಳ ಮೇಲೆ ಜೋತುಬಿದ್ದ ಗಿಡಗಳನ್ನು ಕಡಿಯುವದು ಮತ್ತು ಕಂಟಿಗಳನ್ನು ಸವರುವದು.

ಯಾವದಾದರೊಂದು ಜಾಗೆಯ ಮಾಲಕ ಅಥವಾ ಭೋಗವಟಿದಾರನಿಗೆ ಪಂಚಾಯತಿಯವರು ಲೇಖೀ ನೋಟೀಸಿನಿಂದಾ ಸದರ ನೋಟೀಸ ಮುಟ್ಟಿದ ತಾರೀಖಿನಿಂದ ಪಂಚಾಯತಿಯು ಗೊತ್ತು ಪಡಿಸಿದ ಅವಧಿಯೊಳಗಾಗಿ ಯಾವದಾದರೊಂದು ಸಾರ್ವಜನಿಕ ಕುಡಿಯುವ ನೀರಿನ ಕೆರೆ, ಭಾವಿ, ಅಥವಾ ಕುಡಿಯಲಿಕ್ಕೆ ಉಪಯೋಗಿಸುವ ಇತರ ಜಲಾಶಯದ ಮೇಲೆ ನೀರು ಕೆಡುವ ಹಾಗೆ ಅಥವಾ ಕೆಡಿಸುವ ಸಂಭವಯಿರುವ ಹಾಗೆ ಜೋತು ಬಿದ್ದ ಎಲ್ಲ ಗಿಡಗಳನ್ನು ಅಥವಾ ಕಂಟಿಗಳನ್ನು ಕಡಿಯಲಿಕ್ಕೆ ಅಥವಾ ಸವರಲಿಕ್ಕೆ ಆಜ್ಞಾಪಿಸಬಹುದು.

೧೮. ಕುಡಿಯುವ ಜಲಾಶಯಗಳಲ್ಲಿ ಅಥವಾ ಹತ್ತರ ಮಾಡಬಾರದ ಕೆಲಸಗಳು.

ಕುಡಿಯುವ ನೀರಿನ ಸಲುವಾಗಿ ಕಾದಿಟ್ಟದ್ದೆಂದು ನಿರ್ದಿಷ್ಟಪಡಿಸಿದ ಕೆರೆ, ಭಾವಿ, ಹೌದು ಝರಿ ಅಥವಾ ಇತರ ಜಲಾಶಯದಲ್ಲಿ ಅದರ ಮೇಲೆ ಅಥವಾ ಅದರ ಬದಿಗೆ ೧೦ ಫೂಟಿನೊಳಗಾಗಿ ಯಾರೂ ಸ್ನಾನ ಮಾಡಬಾರದು, ಒಗೆಯಬಾರದು, ತೊಳಿಯಬಾರದು, ಅಥವಾ ತನ್ನ ಅಥವಾ ಇತರರ ಮೈ ಅಥವಾ ಯಾವದಾದರೊಂದು ವಾಹನ, ಗಾಡಿ ಚಕ್ಕಡಿ, ಅಥವಾ ಪ್ರಾಣಿ ಮತ್ತು ಇತರೇ ಯಾವದೇ ಪದಾರ್ಥವನ್ನು ತೊಳಿಯಬಾರದು. ಅಥವಾ ತೊಳಿಸಬಾರದು ಆದರೆ ಕುಡಿಯುವ ನೀರನ್ನು ಒಯ್ಯುವ ಕೊಡಗಳನ್ನು ನೀರಿನಿಂದ ಸ್ವಲ್ಪ ಅಂತರದ ಮೇಲೆ ಗಲಬಲಿಸಿ ತೊಳಿಯಲಿಕ್ಕೆ ಅಡ್ಡಿ ಇಲ್ಲಾ. ಮತ್ತು ಪಂಚಾಯತಿಯವರು

ಪ್ರತ್ಯೇಕವಾಗಿ ಹಚ್ಚಿದ ಸಾರ್ವಜನಿಕ ನೋಟೀಸಿನ ಪ್ರಕಾರ ಗೊತ್ತುಪಡಿಸಲ್ಪಟ್ಟ ಜಾಗೆಯಲ್ಲಿ ಮಾಡಿದ ಯಾವ ಕೃತ್ಯವೂ ಈ ಪ್ರೋಟೆಕಾಯಿದೆ ಪ್ರಕಾರ ಅಪರಾಧವೆನಿಸುವದಿಲ್ಲಾ.

೧೯. ಮಲಮೂತ್ರ ವಿಸರ್ಜನೆ ಮಾಡಬಾರದ ಸ್ಥಳಗಳು.

ಪಂಚಾಯತಿಯವರು ಕುಡಿಯುವ ನೀರಿನ ಸಲುವಾಗಿ ಕಾದಿಟ್ಟದ್ದೆಂದು ನಿರ್ದಿಷ್ಟ ಪಡಿಸಿದ ಯಾವದಾದರು ಹೌದು, ಕೆರೆ, ಭಾವಿ, ಝರಿ ಅಥವಾ ಜಲಾಶಯದ ನೀರು ಕೆಡುವ ಹಾಗೆ ಅಥವಾ ಕೆಡುವ ಸಂಭವವಿರುವಂತೆ ಯಾರೂ ಮಲಮೂತ್ರ ವಿಸರ್ಜನೆ ಮಾಡಬಾರದು. ಮತ್ತು ತನ್ನ ಅಂಕಿತದಲ್ಲಿರುವ ಮಗುವಿನ ಮಲಮೂತ್ರ ವಿಸರ್ಜನೆ ಮಾಡಿಸಬಾರದು. ಮತ್ತು ಪಂಚಾಯತಿಯವರು ಕುಡಿಯುವ ನೀರಿನ ಹೌದು ಕೆರೆ ಭಾವಿ ಅಥವಾ ಝರಿಗೆ ನೀರು ಬರುವ ಸ್ಥಳವೆಂದು ನೋಟೀಸ ಹಚ್ಚಿದಲ್ಲಿಯೂ ಯಾರೂ ಮಲಮೂತ್ರ ವಿಸರ್ಜನೆ ಮಾಡಬಾರದು.

೨೦. ಕೆಟ್ಟ ಜಲಾಶಯದಿಂದ ನೀರು ಒಯ್ಯುವದು ಬಂದು ಮಾಡುವದು.

ಪಂಚಾಯತಿಯವರು ಲೇಖೀ ನೋಟೀಸಿನಿಂದ ಯಾವದಾದರೊಂದು ಝರಿ, ಕೆರೆ, ಭಾವಿ, ಹಳ್ಳ ಅಥವಾ ಇತರ ಜಲಾಶಯದ ನೀರು ಕುಡಿಯುವದರಿಂದ ರೋಗಗಳು ಉಂಟಾಗುವವು, ಅಥವಾ ಉಂಟಾಗಬಹುದೆಂದು ಕಾಣಿಸಿದಲ್ಲಿ ಅಂಥ ಯಾವತ್ತು ಜಲಾಶಯವನ್ನು ತುಗಿದು ಅಥವಾ ಮುಚ್ಚಿ ಪಂಚಾಯತಿಗೆ ಉಚಿತ ಕಂಡ ಇನ್ನಾವದಾದರೂ ರೀತಿಯಿಂದ ಲೇಖೀ ನೋಟೀಸಿನ ಮೂಲಕ ನೀರು ಒಯ್ಯುವದನ್ನು ಅಥವಾ ಉಪಯೋಗಿಸುವದನ್ನು ಬಂದ ಮಾಡಬಹುದು. ಆದರೆ ಹಾಗೆ ಮಾಡಲಿಕ್ಕೆ ಸಮೀಪದಲ್ಲಿ ಬೇರೊಂದು ಸ್ವಚ್ಛ ನೀರಿನ ಪುರವಠೆ ಇರತಕ್ಕದ್ದು.

೨೧. ಶಗಣಿ ಕಸಕಡ್ಡಿ ವಗೈರೆ ಹಾಕಲಿಕ್ಕೆ ಮನಾಯಿ.

ಪಂಚಾಯತಿಯ ಲೇಖೀ ನೋಟೀಸಿನಿಂದಾ ಯಾವದಾದರೊಂದು ಮನೆಯ ಅಥವಾ ಭಾವಿಯ ಮಾಲಕ ಅಥವಾ ಭೋಗವಟೆದಾರನಿಗೆ ನೋಟೀಸ ಮುಟ್ಟಿದ ಇಂತಿಷ್ಟು ದಿವಸಗಳೊಳಗಾಗಿ ಸಾರ್ವಜನಿಕ ಆರೋಗ್ಯತೆ ಆರಾಮು ಅನುಕೂಲಗಳಿಗೆ ಬಾಧೆ ತಟ್ಟುವಂತೆ ಹಾಕಿದ ಶಗಣಿ, ಗೊಬ್ಬರ, ಕಸಕಡ್ಡಿ ಅಥವಾ ಇತರ ಅಪಾಯಕಾರಕ ವಸ್ತುಗಳನ್ನು ತೆಗೆಯಲಿಕ್ಕೆ ತಾಕೀದ ಮಾಡಬಹುದು.

೨೨. ಯಾರು ಗೊಬ್ಬರ, ಕಸಕಡ್ಡಿ ಅಥವಾ ಅಪಾಯಕರ ವಸ್ತುವನ್ನು ಯಾವದಾದರೂ ರಸ್ತೆಯ ಮೇಲೆ, ಅದರ ಬದಿಗೆ ಅಥವಾ ಹೊಳೆ ಹಳ್ಳದ ದಂಡಿಯಲ್ಲಿ ಅಥವಾ ಇತರ ಖಾಲಿ ಜಾಗೆಯಲ್ಲಿ ಸಾರ್ವಜನಿಕ ಆರೋಗ್ಯತೆ ಅಥವಾ ಆರಾಮು ಅನುಕೂಲತೆಗಳಿಗೆ ಬಾಧೆ ತಟ್ಟುವಂತೆ ಹಾಕಬಾರದು. ಅಥವಾ ಸಂಗ್ರಹಿಸಬಾರದು.

೨೩. ಗಟಾರ ಕಾಲಿವೆ ವಗೈರೆಗಳಲ್ಲಿ ಕಸಕಡ್ಡಿ ಚಲ್ಲಬಾರದು.
ಪಂಚಾಯತಿ ಪರವಾನಗಿ ಇಲ್ಲದೆ ಯಾರೂ ಮೋರಿ, ಗಟಾರ ಅಥವಾ ನೀರ ಕಾಲಿವೆಯಲ್ಲಿ ಗೊಬ್ಬರ ಅಥವಾ ಇತರ ಕಸಕಡ್ಡಿ ಚಲ್ಲಬಾರದು. ಅಥವಾ ತಮ್ಮ ಮನೆಯವರಿಂದ ಚಲ್ಲಿಸಬಾರದು.

೨೪. ಅಪಾಯಕರ ಉದ್ಯೋಗ ಅಥವಾ ವ್ಯಾಪಾರಗಳ ಸಂಬಂಧಿ ನಿಯಮಗಳು.

(ಅ) ಈ ಪೋಟ ಕಾಯಿದೆಗಳಲ್ಲಿ ವಿಷಯ ಅಥವಾ ಸಂದರ್ಭಕ್ಕೆ ವಿರೋಧ ಬಾರದಲ್ಲಿ ಅಪಾಯಕರ ದಂಧೆ ಅಥವಾ ಉದ್ದಿಮೆ ಈ ಶಬ್ದಗಳಲ್ಲಿ ಕೆಳಗೆ ನಮೂದಿಸಿದ ಪ್ರಕಾರ ಯಾವದಾದರೊಂದು ಅಥವಾ ಹೆಚ್ಚು ಕ್ರಿಯೆಗಳು ಅಡಕವಾಗುವವು.

೧. ಮೃಗಗಳ ತೊಗಲು, ಕೋಡು ಅಥವಾ ಚರ್ಮಗಳ ಸಂಗ್ರಹ ಮಾಡುವದು.

೨. ಚರ್ಮಕ್ಕೆ ಹದಮಾಡುವದು.

೩. ಚರ್ಮ ಅಥವಾ ಚರ್ಮದ ಸಾಮಾನು ತಯಾರಿಸುವದು.

೪. ಬಣ್ಣ ಹಾಕುವದು.

೫. ಉಣ್ಣೆ ಅಥವಾ ಕೂದಲುತೊಳೆಯುವದು ಅಥವಾ ಒಣಗಿಸುವದು.

೬. ಇಟ್ಟಂಗಿ, ಮಂಣಿನ ಗಡಿಗಿ ಅಥವಾ ಸುಣ್ಣದ ಭಟ್ಟಿ ಮಾಡುವದು.

(ಬ) "ಮ್ಯಾನೇಜರ" ಅಂದರೆ ಯಾರ ಅಧಿಕಾರದ ಕೆಳಗೆ ಅಥವಾ ಮೇಲ್ವಿಚಾರಣೆಯಲ್ಲಿ ಅಥವಾ ಯಾರ ಫಾಯದೆ ಸಲುವಾಗಿ ಯಾವದೊಂದು ಅಪಾಯಕರ ದಂಧೆ ನಡೆದಿರುವದೋ ಅಂಥ ಮನುಷ್ಯನೆಂದು ಅರ್ಥವಾಗುವದು. ಸದರ ಮನುಷ್ಯನು ಸದರ ದಂಧೆಯ ಮಾಲಕನಿರಬಹುದು. ಅಥವಾ ಎಜಂಟನಾತೆದಿಂದಾ ಕೆಲಸ ಮಾಡುತ್ತಿರಬಹುದು.

೨೫. ಅಪಾಯಕರ ಪ್ರತಿಯೊಂದು ದಂಧೆಯ ಮಾನೇಜರನು ಯಾವತ್ತೂ ಯೋಗ್ಯ ವೇಳೆಯಲ್ಲಿ ಪಂಚಾಯತಿಯ ಯಾವದೇ ಮೆಂಬರನಿಗೆ ಅಥವಾ ಪಂಚಾಯತಿಯಿಂದ ಈ ಸಂಬಂಧೀ ಕಳಿಸಲ್ಪಟ್ಟ ಇತರ ಯಾವದೇ ಮನುಷ್ಯನಿಗೆ ತನ್ನ ದಂಧೆಯ ವಟಾರದ ಯಾವತ್ತೂ ಭಾಗಗಳಲ್ಲಿ ಹೋಗಲಿಕ್ಕೆ ಮುಕ್ತದ್ವಾರವಿಡತಕ್ಕದ್ದು. ಮತ್ತು ಅದರ ತಪಾಸಣೆಗೆ ಯಾವತ್ತೂ ಅನುಕೂಲತೆಗಳನ್ನು ಒದಗಿಸಿಕೊಡತಕ್ಕದ್ದು.

೨೬. ಅಪಾಯಕರ ಧಂದೆಯ ಪ್ರತಿಯೊಬ್ಬ ಮ್ಯಾನೇಜರನು ಕೆಳಗಿನ ಅವಶ್ಯಕತೆಗಳನ್ನು ಪಾಲಿಸತಕ್ಕದ್ದು.

ಅವನು ತನ್ನ ಅಧೀನದಲ್ಲಿರುವ ವಟಾರದಲ್ಲಿ ಶಗಣಿ, ಕಚರಾ ಅಥವಾ ಇತರ ಕಸಕಡ್ಡಿ ಲದ್ದಿ ಹತ್ತಿಯ ಕಸಟು ಅಥವಾ ಹೊಲಸು ಎಲೆ ಇಡತಕ್ಕದ್ದಲ್ಲ. ಅಥವಾ ಇಡಗೊಡಕೂಡದು.

(ಬ) ಅವನು ಪುಟವು ಮಾಡುವ ಮೊದಲು ಅಥವಾ ನಂತರ ದುರ್ಗಂಧವಿಡುವ ಅಥವಾ ಆರೋಗ್ಯಕ್ಕೆ ಅಪಾಯವುಳ್ಳ ಹೊಗೆ ಹೊರಡುವ ಯಾವದೇ ವಸ್ತು ಅಥವಾ ಉರವಲು ಉಪಯೋಗಿಸತಕ್ಕದ್ದಲ್ಲ.

೨೭. ಇಟ್ಟಂಗಿ ಅಥವಾ ಸುಣ್ಣದ ಭಟ್ಟಿಯ ಪ್ರತಿಯೊಬ್ಬ ಮ್ಯಾನೇಜರನು ಪಂಚಾಯತಿಯವರು ಗೊತ್ತುಪಡಿಸಿದ ವೇಳೆಯಲ್ಲಿ ಅವರು ನೀರಿನ ಸಾತಾದ ಬಗ್ಗೆ ಮಾಡಿದ ನಿರ್ಬಂಧಗಳನ್ನನುಸರಿಸಿ ಅವುಗಳನ್ನು ಹೊತ್ತಿಸತಕ್ಕದ್ದು.

೨೮. ಚರ್ಮ ಹದಗೊಳಿಸುವ ಕಾರಖಾನೆಯ ಪ್ರತಿಯೊಬ್ಬ ಮ್ಯಾನೇಜರನು ಕೆಳಗಿನ ನೇಮುಗಳನ್ನು ಅನುಸರಿಸತಕ್ಕದ್ದು.

(ಅ) ಅವನು ಚರ್ಮವನ್ನು ಹದಗೊಳಿಸುವ ಪ್ರತಿಯೊಂದು ಗುಂಡಣಕ್ಕೆ ಸರಿಯಾಗಿ ಕೂಡ್ರುವ ಒಂದು ಮುಚ್ಚಳವನ್ನು ಮಾಡಿಸತಕ್ಕದ್ದು ಮತ್ತು ಅದನ್ನು ಚರ್ಮವನ್ನು ನೆನೆಯಿಸುವ ವೇಳೆಯ ಹೊರತಾಗಿ ಉಳಿದ ವೇಳೆಯಲ್ಲಿ ಯಾವಾಗಲೂ ಮುಚ್ಚಿರತಕ್ಕದ್ದು.

(ಬ) ಪ್ರತಿಯೊಂದು ಗುಂಡಾಣದೊಳಗಿನ ಯಾವತ್ತೂ ಕಸರನು ಪಂಚಾಯತಿಯವರು ಗೊತ್ತುಪಡಿಸಿದ ರೀತಿಯಿಂದ ಒಯ್ಯತಕ್ಕದ್ದು.

(ಕ) ಅವನು ಚರ್ಮಗಳಿಗೆ ಬಣ್ಣಕೊಡಲಿಕ್ಕೆ ಹರವುವವರಲ್ಲಿ ಮತ್ತು ಹದ ಮಾಡಿದ ಚರ್ಮಗಳನ್ನು ಕೂಡಿಡುವವರಲ್ಲಿ ಅಪಾಯಕರ ವಾಸನೆಯು ಕಡಿಮೆ ಆಗಲಿಕ್ಕೆ ಪಂಚಾಯತಿಯವರು ನಿರ್ದಿಷ್ಟಪಡಿಸಿದ ಮುಂಜಾಗ್ರತೆ ತೆಗೆದುಕೊಳ್ಳತಕ್ಕದ್ದು.

೨೯. ಬಣ್ಣಹಾಕಲಿಕ್ಕೆ ಉಪಯೋಗಿಸುವ ಪ್ರತಿಯೊಂದು ಇಮಾರತಿ ಅಥವಾ ಜಾಗೆಯ ಮ್ಯಾನೇಜರನು ಕೆಳಗಿನ ನೇಮುಗಳನ್ನು ಪಾಲಿಸತಕ್ಕದ್ದು.

(ಅ) ಅವರು ಪ್ರತಿದಿವಸ ಯಾವತ್ತು ಘಟ್ಟ ಮತ್ತು ದ್ರಾವಕ ಕಸ ರನ್ನು ಕೂಡಿಸಿ ಅದನ್ನು ಪಂಚಾಯತಿಯವರು ಗೊತ್ತುಪಡಿಸಿದ ಪ್ರಕಾರ ಚಲ್ಲಿಸುವ ವ್ಯವಸ್ಥೆ ಇಡತಕ್ಕದ್ದು.

(ಬ) ಅವನು ಗೋಂದಿ ಅಥವಾ ಇತರ ಕಾಳುಗಳನ್ನು ನೆನೆ ಹಾಕ ಲಿಕ್ಕೆ ಮುಚ್ಚಿದ ಪಾತ್ರೆಗಳನ್ನು ಮಾತ್ರ ಉಪಯೋಗಿಸತಕ್ಕದ್ದು. ಮತ್ತು ಗಂಜಿಯನ್ನು ಮಾಡಲಿಕ್ಕೆ ಉಪಯೋಗಿಸಿದ ಸಾಮಾನುಗಳನ್ನು ನೆರೆ ಹೊರೆಯ ಆರೋಗ್ಯಕ್ಕೆ ಅಪಾಯ ತಟ್ಟುವ ಹಾಗೆ ದುರ್ವಾಸನೆ ಇಡುವ ಪೂರ್ವದಲ್ಲಿ ಮೂರಪಡಿಸತಕ್ಕದ್ದು.

(ಕ) ಸಾರ್ವಜನಿಕ ರಸ್ತೆ ಅಥವಾ ಮನೆಯಿಂದ ಪಂಚಾಯತಿ ಗೊತ್ತುಪಡಿಸಿದ ಅಂತರದೊಳಗೆ ಯಾವ ಅರವಿಯನ್ನು ಹರುವಗೊಡ ತಕ್ಕದ್ದಲ್ಲ.

೩೦. ಹೆಣಗಳನ್ನು ಹುಗಿಯುವ ಅಥವಾ ನಾಶಮಾಡುವ ಸಂಬಂಧಿ ನೇಮಗಳು.

ಒಂದು ಸ್ಥಳದಲ್ಲಿ ಯಾರಾದರೂ ಒಬ್ಬರು ಸತ್ತಿದ್ದರೆ ಅಂಥ ಸ್ಥಳದ ಮಾಲಕನು, ಅವನ ಗೈರಹಾಜರಿಯಲ್ಲಿ ಅಲ್ಲಿ ಇರುವವನು ಸಾಧ್ಯವಿದ್ದ ಪ್ರಯತ್ನ ಮಾಡಿ ಸತ್ತ ೨೪ ತಾಸುಗಳಲ್ಲಿ ಸತ್ತವನ ಆಪ್ತೇಷ್ಟರಿಂದಾಗಲೀ ಅಥವಾ ಅವನ ಜಾತಿಯವರಿಂದಾಗಲೀ ಹೆಣವನ್ನು ಹುಗಿಸುವ ಸುಡಿ ಸುವ ಅಥವಾ ಮೃತನ ಜಾತಿ ಧರ್ಮಕ್ಕನುಸರಿಸಿ ಇತರ ಯಾವದಾ ದರೂ ರೀತಿಯಿಂದ ಅದರ ವ್ಯವಸ್ಥೆ ಮಾಡಿಸುವ ತಜವೀಜ ಮಾಡ ತಕ್ಕದ್ದು. ಹಾಗೆ ಮಾಡಲಿಕ್ಕೆ ಶಕ್ಯವಿಲ್ಲದಿದ್ದ ಪಕ್ಷದಲ್ಲಿ ಸತ್ತ ಸುದ್ದಿ ಯನ್ನು ಸರಪಂಚನಿಗಾಗಲೀ ಅಥವಾ ಪಂಚಾಯತಿಯವರು ಈ ಸಂಬಂಧಿ ನೇಮಿಸಿದ ಇತರ ಅಧಿಕಾರಿಗಳಿಗೆ ತಿಳಿಸತಕ್ಕದ್ದು.

೩೧. ಪ್ರತಿಯೊಬ್ಬ ಮನುಷ್ಯನು ಯಾವದಾದರೂ ಸ್ಥಳದಲ್ಲಿ ಹೆಣವು ದಫನ ವ್ಯವಸ್ಥೆ ಇಲ್ಲದೆ ಬಿದ್ದಿರುವದೆಂದು ತಿಳಿದುಬಂದ ಕೂಡಲೆ

ಅವನು ಆ ಸುದ್ದಿಯನ್ನು ಸರಪಂಚನಿಗೆ ಅಥವಾ ಪಂಚಾಯತಿಯವರು ಆ ಸಂಬಂಧಿ ನೇಮಿಸಿದ ಅಧಿಕಾರಿಗೆ ತಿಳಿಸತಕ್ಕದ್ದು.

೩೨. ಮೇಲಿನ ಪ್ರಕಾರ ಸುದ್ದಿ ಮುಟ್ಟಿದ ಕೂಡಲೆ ಪಂಚಾಯತಿಯವರು ತಮ್ಮ ಮುಖಾಂತರ ಹೆಣದ ವ್ಯವಸ್ಥೆ ಮಾಡತಕ್ಕದ್ದು. ಮತ್ತು ಆ ಸಂಬಂಧಿ ಏನಾದರೂ ಖರ್ಚು ಬಂದರೆ ಅದನ್ನು ಸತ್ತವನ ಆಪ್ತರಿಂದಾ ಮನೆಯ ಮೇಲಿನಕರ ಬಾಕಿಯಂತೆ ವಸೂಲ ಮಾಡತಕ್ಕದ್ದು. ಜರ ಸತ್ತವನಿಗೆ ಅಂಥ ಆಪ್ತರಿಲ್ಲದಿದ್ದರೆ ಸದರ ಹಣಾ ಪಂಚಾಯತ ಫಂಡಿಗೆ ಖರ್ಚು ಹಾಕತಕ್ಕದ್ದು.

೩೩. ಈ ಪೋಟಕಾಯಿದೆಗಳು ಅಮಲಿನಲ್ಲಿ ಬರುವ ಪೂರ್ವದಲ್ಲಿ ಉಪಯೋಗದಲ್ಲಿ ಇರದೇ ಇದ್ದ ಜಾಗೆಯನ್ನು ಯಾವನೂ ಶವದ (ಪುರುಷನ ಅಥವಾ ಪ್ರಾಣಿಯ) ವ್ಯವಸ್ಥೆಗೆ ಉಪಯೋಗಿಸತಕ್ಕದ್ದಲ್ಲಾ. ಆದರೆ ಇತರ ಸ್ಥಳದಲ್ಲಿ ಹುಗಿಯಲಿಕ್ಕೆ ಅಥವಾ ಸುಡಲಿಕ್ಕೆ ಪಂಚಾಯತಿ ಪೂರ್ವಸಮ್ಮತಿ ಇದ್ದು ಆ ಪ್ರಕಾರ ನೋಟೀಸಿನಿಂದಾ ಪ್ರಸಿದ್ಧಿಸಿದ್ದರೆ ಆ ಪ್ರಕಾರ ದಫನ ಮಾಡಲಿಕ್ಕೆ ಅಡ್ಡಿ ಇಲ್ಲ.

೩೪. ಭೂಮಿಯ ಸಮಪಾತಳಿಯಿಂದ ನಾಲ್ಕು ಫೂಟಗಿಂತ ಕಡಿಮೆಯಿದ್ದ ತೆಗ್ಗಿನಲ್ಲಿ ಯಾರೂ ಮನುಷ್ಯನ ಅಥವಾ ಪ್ರಾಣಿಯ ಶವವನ್ನು ಹುಗಿಯಬಾರದು; ಅಥವಾ ಹುಗಿಯಗೊಡಬಾರದು.

೩೫. ಪಂಚಾಯತಿಯ ಪರವಾನಗಿ ಇಲ್ಲದೆ, ಪಂಚಾಯತಿ ತಾಬಾದಲ್ಲಿರುವ ಯಾವದೇ ಸಾರ್ವಜನಿಕ ರಸ್ತೆ ಅಥವಾ ಖಾಲಿ ಜಾಗಾದ ಮೇಲೆ ಯಾರೂ ಹೆಣವನ್ನು ಇಡಬಾರದು; ಅಥವಾ ಇಡಗೊಡಬಾರದು. ಅದರಂತೆ ಇತರ ಯಾವದೇ ಸ್ಥಳದಲ್ಲಿ ಆ ಸ್ಥಳದ ಮಾಲಕ ಅಥವಾ ಭೋಗವಟೆದಾರನ ಪರವಾನಗಿ ಹೊರ್ತು ಹೆಣವನ್ನು ಇಡಬಾರದು; ಮತ್ತು ಇಡಗೊಡಬಾರದು.

೩೬. ಒಂಟೆ, ಕುದುರೆ, ಕತ್ತೆ, ತಟ್ಟು, ಹೇಸರಕತ್ತೆ, ಎತ್ತು, ಆಕಳು, ಆಕಳಕರ, ಎಮ್ಮಿ, ಕೋಣ, ಟಗರು, ಆಡು, ಕುರಿಮರಿ, ಆಡಿನಮರಿ, ಚಿಗರಿ, ಬೆಕ್ಕು, ನಾಯಿ, ಅಥವಾ ಮನುಷ್ಯನ ಆಹಾರಕ್ಕೆ ಉಪಯೋಗವಿಲ್ಲದ ಇತರ ಪ್ರಾಣಿಯು ಸತ್ತಿದ್ದರೆ ಅದರ ಒಡೆಯನು ಅಥವಾ ತಾಬೇದಾರನು ಅಥವಾ ಅಂಥವರು ಯಾರೂ ಇಲ್ಲದಿದ್ದರೆ ಆ ಪ್ರಾಣಿಯು ಸತ್ತು ಬಿದ್ದ ಜಾಗೆಯ ಭೋಗುವಟಿದಾರನು ಪಂಚಾಯತಿಯು ನಿರ್ದಿಷ್ಟಪಡಿಸಿದ ರೀತಿಯಿಂದ ಅದರ ವ್ಯವಸ್ಥೆ ಮಾಡತಕ್ಕದ್ದು.

೩೭. ವಿಶೇಷ ಕಾರಣಗಳ ಮೂಲಕ ಯಾವದಾದರೂ ಸ್ಥಳದ ಮಾಲಕ ಅಥವಾ ಭೋಗುವಟಿದಾರನಿಗೆ ೩೬ ನೇ ಪೋಟ ಕಾಯಿದೆದಲ್ಲಿ ಹೇಳಿದಂತೆ ಮಾಡಲಿಕ್ಕೆ ಅಶಕ್ಯವಿದ್ದರೆ ಅವನು ಕೂಡಲೇ ಆ ಶವವನ್ನು ಒಯ್ದು ಅದರ ವ್ಯವಸ್ಥೆ ಮಾಡಲಿಕ್ಕೆ ಪಂಚಾಯತಿಗೆ ಅರ್ಜಿಮಾಡತಕ್ಕದ್ದು. ಆ ಬಗ್ಗೆ ಪಂಚಾಯತಿಗೆ ತಗಲಿದ ಖರ್ಚನ್ನು ಪಂಚಾಯತ ಆಕ್ಟ ಪ್ರಕಾರ ಮನೆಪಟ್ಟಿ ಬಾಕಿಯಂತೆ ವಸೂಲ ಮಾಡತಕ್ಕದ್ದು.

೩೮. ಸಾರ್ವಜನಿಕ ಆರೋಗ್ಯತೆಗೆ ಬಾಧೆ ತಟ್ಟುವಂತೆ ಅಥವಾ ನೆರೆಹೊರೆಗೆ ಅಪಾಯವಾಗುವಂತೆ ಮಣ್ಣು ಅಗಿಯುವ ಅಥವಾ ತಗ್ಗು ತೋಡುವ ಸಂಬಂಧಿ ನೇಮಗಳು:—

ಯಾವದಾದರು ಜಾಗಾದಲ್ಲಿ ನೆಲದೊಳಗಿಂದ ಮಣ್ಣು ಅಥವಾ ಇತರ ಸಾಮಾನು ಅಗಿಯುವದು ಆರೋಗ್ಯಕ್ಕೆ ಬಾಧಕ ಅಥವಾ ಆ ನೆರೆಗೆ ಅಪಾಯಕರವಿರುವದೆಂದೆನಿಸಿದರೆ ಪಂಚಾಯತಿಯವರು ಲೇಖೀ ನೋಟಿಸಿನಿಂದ ಆ ಸ್ಥಳದ ಮಾಲಕನಿಗೆ ಅಥವಾ ಆ ಪ್ರಕಾರ ತಗ್ಗು ತಗಿಯಲಿಕ್ಕೆ ಜವಾಬ್ದಾರನಿದ್ದವನಿಗೆ ತಗ್ಗು ತಗಿಯಬಾರದು ಅಥವಾ ತಗಿಯಗೊಡಬಾರದು ಅಥವಾ ಆ ಸ್ಥಳದಿಂದ ಆಗುವ ಅಥವಾ ಆಗಬಹುದಾದ ಅಪಾಯ ಅಥವಾ ತೊಂದರೆಯ ನಿವಾರಣೆಗೆ ಯೋಗ್ಯ ಉಪಾಯ ಕೈಕೊಳ್ಳಲಿಕ್ಕೆ ತಿಳಿಸತಕ್ಕದ್ದು. ಮತ್ತು ಜಾಗೆಯ ಮಾಲಕನು ಅಥವಾ

ಆ ಪ್ರಕಾರ ತಗ್ಗು ವಗೈರೆ ತೆಗೆಯಲಿಕ್ಕೆ ಜವಾಬ್ದಾರನಿದ್ದವನು ಪಂಚಾಯತಿಯ ಹುಕುಂ ಮಾನ್ಯಮಾಡಲಿಕ್ಕೆ ಬೇಕು.

ಆದರೆ ಅಂಥ ಸ್ಥಳವು ಸರಕಾರಿ ಅಥವಾ ಲೋಕಲ್ ಬೋರ್ಡಿನದಿದ್ದರೆ ಅಥವಾ ಮಣ್ಣು ವಗೈರೆ ಒಯ್ಯುವದು ಸರಕಾರ ಅಥವಾ ಲೋಕಲ್ ಬೋರ್ಡಿನಿಂದ ಅಥವಾ ಅವರ ಪರವಾನಿಗಿಯಿಂದ ಇದ್ದರೆ ಮಿ. ಕಲೆಕ್ಟರ ಅಥವಾ ಪ್ರೆಸಿಡೆಂಟ ಜಿಲ್ಹಾ ಲೋಕಲ ಬೋರ್ಡ ಇವರ ಸಮ್ಮತಿ ಪಡೆದ ಹೊರತು ಪಂಚಾಯತಿಯವರು ಆ ಸಂಬಂಧಿ ಏನೂ ಕೆಲಸ ನಡಿಸತಕ್ಕದ್ದಲ್ಲ.

೩೯. ಜನವಸತಿಯ ನೆರೆಯಲ್ಲಿ ಅವರ ಆರೋಗ್ಯಕ್ಕೆ ಬಾಧೆ ತಟ್ಟುವಂತೆ ಹಾಲಿ ಇದ್ದ ತಗ್ಗುಗಳನ್ನು ಮುಚ್ಚಲಿಕ್ಕೆ ಪಂಚಾಯತಿಯು ೩೮ ನೇ ಪೋಟ ಕಾಯಿದೆಯಲ್ಲಿ ಹೇಳಿದ ಪ್ರಕಾರ ಕೆಲಸ ನಡಿಸತಕ್ಕದ್ದು.

೪೦. ಅಪಾಯಕರ ಕಸಕಡ್ಡಿ ತೆಗೆಯುವ ಸಂಬಂಧಿ ನಿಯಮಗಳು:—

ಯಾವದಾದರೂ ಮನೆಯ ಅಥವಾ ಭೂಮಿಯ ಮಾಲಕನಿಗೆ ಅಥವಾ ಭೋಗುವಟೆದಾರನಿಗೆ ಪಂಚಾಯತಿಯು ಲೇಖೀ ನೋಟೀಸಿನಿಂದ ಅದು ಮುಟ್ಟಿದ ಇಂಥಾ ತಾರೀಖಿನೊಳಗಾಗಿ ಡಬ್ಗಳ್ಳಿ ಅಥವಾ ಪಂಚಾಯತಿಗೆ ತೆಗೆದುಹಾಕತಕ್ಕದ್ದೆಂದೆನಿಸಿದ ಇತರ ಯಾವದಾದರೂ ಕಸಕಡ್ಡಿ ತೆಗೆಯುತಕ್ಕದ್ದೆಂದು ತಿಳಿಸತಕ್ಕದ್ದು.

೪೧. ಅಂಥ ಮನೆಯ ಮಾಲಕ ಅಥವಾ ಭೋಗುವಟೆದಾರನು ೪೦ ನೇ ಪೋಟ ಕಾಯದೆ ಪ್ರಕಾರ ಕೊಟ್ಟ ನೋಟೀಸದಂತೆ ನಡೆಯದಿದ್ದರೆ ಪಂಚಾಯತಿಯವರು ಸದರ ಡಬ್ಗಳ್ಳಿ ಅಥವಾ ಇತರ ಅಪಾಯಕರ ಕಸಕಡ್ಡಿಯನ್ನು ತೆಗೆಯಿಸುವ ವ್ಯವಸ್ಥೆ ಮಾಡತಕ್ಕದ್ದು ಆ ಪ್ರಕಾರ ತೆಗೆಯಿಸಲಿಕ್ಕೆ ತಗಲಿದ ಖರ್ಚನ್ನು ಪಂಚಾಯತ ಆ್ಯಕ್ಟ ಪ್ರಕಾರ ಸದರ ಮನೆಯ ಮಾಲಿಕ ಅಥವಾ ಭೋಗುವಟೆದಾರನಿಂದ ಮನಿಪಟ್ಟಿ ಬಾಕಿಯಂತೆ ವಸೂಲ ಮಾಡಲಾಗುವದು.

೪೨. ಅಪಾಯಕರ ಅಥವಾ ಹಾಳು ಇಮಾರತಿಗಳ ದುರಸ್ತಿ ಅಥವಾ ತೆಗೆಯೋಣದರ ಸಂಬಂಧಿ ನೇಮುಗಳು:—

ಪಂಚಾಯತಿಗೆ ಯಾವದಾದರೊಂದು ಇಮಾರತಿಯು ಅಥವಾ ಅದಕ್ಕೆ ಹೊಂದಿದ ಕಟ್ಟಡವು ಹಾಳುಬಿದ್ದಿರುವದೆಂದು ಅಥವಾ ಬೀಳ ಲಾಗಿದೆ ಅಥವಾ ನೆರೆಮನೆಗೆ ಅಥವಾ ಅದರಲ್ಲಿರುವವನಿಗೆ ಅಥವಾ ದಾರಿಕಾರನಿಗೆ ಅಪಾಯಕರವೆಂದೆನಿಸಿದರೆ ಪಂಚಾಯತಿಯವರು ಕೂಡಲೆ ದಾರಿಕಾರರ ಸುರಕ್ಷಿತಕ್ಕಾಗಿ ಅದಕ್ಕೆ ತಾವಾಗಲೀ ಅಥವಾ ಮನೆಯ ಮಾಲಿಕನಿಂದಾಗಲೀ ಸಾರವನ್ನು ಕಟ್ಟಿಸತಕ್ಕದ್ದು ಅಥವಾ ಬೇಲಿಯನ್ನು ಹಚ್ಚಿಸತಕ್ಕದ್ದು. ಈ ಸಮ್ಮಂಧಿ ಪಂಚಾಯತಿಗೆ ತಗಲಿದ ಯಾವತ್ತು ಖರ್ಚು ಪಂಚಾಯತದಿಂದಾ ಕೂಡ್ರಿಸಲ್ಪಟ್ಟ ಕರದ ಬಾಕಿಯಂತೆ ಮನೆಯ ಮಾಲಕನಿಂದ ವಸೂಲ ಮಾಡಲ್ಪಡುವದು.

೪೩. ಇದಲ್ಲದೆ ಪಂಚಾಯತಿಯು ಲೇಖೀ ನೋಟೀಸಿನಿಂದಾ ಮನೆಯ ಮಾಲಿಕನಿಗೆ ಅಥವಾ ಭೋಗುವಟೀದಾರನಿಗೆ ಕೂಡಲೆ ಆ ಮನೆಯನ್ನು ಕೆಡವಲಿಕ್ಕೆ ಸರಿಪಡಿಸಲಿಕ್ಕೆ ಅಥವಾ ಅಂಥ ಇಮಾರತಿ ಅಥವಾ ಅದಕ್ಕೆ ಹೊಂದಿದ ಕಟ್ಟಡ ರಿಪೇರಿ ಮಾಡಲಿಕ್ಕೆ ತಿಳಿಸತಕ್ಕದ್ದು ಮತ್ತು ಅಂಥ ಮಾಲಿಕನು ಅಥವಾ ಭೋಗುವಟೀದಾರನು ನೋಟೀಸ ಜಾರಿ ತಾರೀಖಿನಿಂದಾ ಮೂರು ದಿವಸಗಳೊಳಗೆ ಇಮಾರತಿ ರಿಪೇರಿ ಮಾಡಲಿಕ್ಕೆ ಅಥವಾ ಕೆಡವಲಿಕ್ಕೆ ಸುರುವು ಮಾಡಿ ಕಾಳಜಿಪೂರ್ವಕ ಮುಗಿಸದಿದ್ದರೆ ಪಂಚಾಯತಿಯವರು ಆ ಇಮಾರತಿಯನ್ನು ಅಥವಾ ಅದರ ಅವಶ್ಯ ಕಂಡ ಭಾಗಗಳನ್ನು ಕೆಡವಿಸತಕ್ಕದ್ದು. ರಿಪೇರಿ ಇಲ್ಲವೆ ಬೇರೆ ಯಾವ ರೀತಿಯಿಂದ ಅದನ್ನು ಸರಿಪಡಿಸತಕ್ಕದ್ದು.

೪೪. ಆದರೆ ಅಪಾಯವು ಕೂಡಲೆ ಸಂಭವಿಸವಂತಿಲ್ಲದಿದ್ದರೆ ಪಂಚಾಯತಿಯು ತಾವೇ ಸಾರ ಅಥವಾ ಬೇಲಿ ಕಟ್ಟಿಸುವ ಮೊದಲು ಮನಿ ಮಾಲಕನಿಗೆ ಅಥವಾ ಭೋಗುವಟೀದಾರನಿಗೆ ಸರಿಯಾದ ಸಾರ

ವನ್ನು ಅಥವಾ ಭೋಗುವಟಿದಾರನಿಗೆ ಸರಿಯಾದ ಸಾರವನ್ನು ಅಥವಾ ಬೇಲಿ ಕಟ್ಟಿಸಲಿಕ್ಕೆ ಲೇಖೀ ನೋಟೀಸಿನಿಂದ ತಿಳಿಸತಕ್ಕದ್ದು. ಮತ್ತು ಮನಿಯ ಮಾಲಕನು ಅಥವಾ ಭೋಗುವಟಿದಾರನು ನೋಟೀಸ ಮುಟ್ಟಿದ ಎರಡು ದಿವಸಗಳೊಳಗಾಗಿ ಪಂಚಾಯತಿಗೆ ಸಾಕಷ್ಟು ಸುರಕ್ಷಿತವಾಗಿ ಕಾಣುವಂತೆ ಬೇಲಿ ಅಥವಾ ಸಾರವನ್ನು ಕಟ್ಟಲಿಕ್ಕೆ ತಪ್ಪಿದಲ್ಲಿ, ಪಂಚಾಯತಿಯವರು ಕೂಡಲೆ ತಾವೇ ಬೇಲಿ ಅಥವಾ ಸಾರವನ್ನು ಕಟ್ಟಿಸಿ ನಂತರ ೪೨, ೪೩ ನೇ ಪೋಟ ಕಾಯದೆಯಲ್ಲಿ ಹೇಳಿದಂತೆ ಮುಂದಿನ ಕೆಲಸ ನಡೆಯಿಸತಕ್ಕದ್ದು.

೪೫. ಸಾಕಷ್ಟು ಗಾಳಿ, ಬೆಳಕಿಗೆ ಆಸ್ಪದವಿಲ್ಲದಂತೆ ಮನಿ ಕಟ್ಟಲಿಕ್ಕೆ ಪ್ರತಿಬಂಧವು.

"ಪ್ಲಾಟ" (ಮನೆಗಳ) ಎಂದರೆ ಈ ಪೋಟ ಕಾಯಿದೆಗಳಲ್ಲಿ ಮನೆ ಕಟ್ಟಿದ ಅಥವಾ ಕಟ್ಟಲಿದ್ದ ಸ್ಥಳವೆಂದು ಅರ್ಥವಾಗುವದು. ಇದರಲ್ಲಿ ಮನೆಯ ಕಂಪೌಂಡಿಗೆ ಅವಶ್ಯವಿದ್ದ ಖುಲ್ಲಾ ಜಾಗೆಯು ಅಡಕವಾಗುವದು.

೪೬. ಪಂಚಾಯತಿಯವರು ನಿರ್ದಿಷ್ಟಪಡಿಸದ ಮೇರೆಗೆ ಇಮಾರತಿ ಕಟ್ಟತಕ್ಕ ಪ್ರತಿಯೊಂದು ಮನೆದಳದ ಸುತ್ತಳತೆಯೊಳಗೆ ಪಂಚಾಯತಿಯವರು ಗೊತ್ತುಮಾಡಿದ ಮೇರೆಗೆ ಅರ್ಧದಷ್ಟು ಅಥವಾ ಮೂರರಲ್ಲೊಂದು ಭಾಗದಷ್ಟು ಖುಲ್ಲಾ ಜಾಗಾ ಬಿಡತಕ್ಕದ್ದು; ಮತ್ತು ಅದನ್ನು ಕಾಯಿಮು ಇಡತಕ್ಕದ್ದು.

೪೭. ಇಮಾರತಿಯ ಮತ್ತು ಪ್ಲಾಟಿನ ಹಿಂದಿನ ಅಖೈರ ಹದ್ದು, ಇವುಗಳ ನಡುವೆ ಮನಿ ಹಿಂದಿನ ಗೋಡೆಯಿಂದ ಕನಿಷ್ಟ ಐದು ಫೂಟ ನಿಂದ ಸರಾಸರಿ ೧೦ ಫೂಟು ಅಂತರದ ವರೆಗೆ ವಿಘಡಾ ಇರುವ ಖುಲ್ಲಾ ಸ್ಥಳವಿರಬೇಕು. ಈ ಅಳತೆಯು ಗೋಡೆಯಿಂದ ಸಮಕೋನದ ಅಂತರವಿರಬೇಕು.

೪೮. ಇಮಾರತಿಯ ಪ್ರತಿಯೊಂದು ಖೋಲಿಗೆ ಗಾಳಿ ಬೆಳಕು ಬರುವಂತೆ ಬಾಗಿಲು ಕಿಡಿಕಿಗಳು ಇರಬೇಕು. ಇವುಗಳ ಒಟ್ಟು ಕ್ಷೇತ್ರವು ಖೋಲಿಯ ನೆಲದ ಕ್ಷೇತ್ರದ ಕನಿಷ್ಟ $\frac{೧}{೧೫}$ ದಷ್ಟು ಇರಬೇಕು.

೪೯. ಇಮಾರತಿಗಳಿಗೆ ಸಾಯಖಾನೆ ಕಟ್ಟಿಸುವದಾದರೆ ಮೂರು ಫೂಟು ಅಗಲು ಖುಲ್ಲಾ ಜಾಗಾವಿರಬೇಕು; ಮತ್ತು ಅದಕ್ಕೆ ಹೋಗುವ ಜಾಗಾ ಕನಿಷ್ಟ ೨ ಫೂಟು ಇದ್ದು ಎರಡೂ ಬಾಜು ದಿನಾಲು ಹವೆಯು ಬರುವಂತೆ ಇರಬೇಕು.

೫೦. ರಸ್ತೆ ರಚನೆ ಮತ್ತು ಸ್ಥಳ ಗೊತ್ತುಪಡಿಸುವ ಸಂಬಂಧಿ ನೇಮಗಳು.

ಮನೆ ಕಟ್ಟಿಸುವಾಗ ರಸ್ತೆಕ್ಕೆ ಹೊಂದಿ ಮನೆ ಕಟ್ಟಬಾರದು. ರಸ್ತೆಯ ಹದ್ದಿಗೂ ಮನೆಗೂ ನಡುವೆ ಕನಿಷ್ಟ ೫೧ ಫೂಟು ಅಂತರವಿರಬೇಕು.

೫೧ ಸಾರ್ವಜನಿಕ ರಸ್ತೆದಿಂದ ಮನೆಗೆ ಬರಹೋಗುವದಕ್ಕೆ ದಾರಿ ಬಿಡದೆ ಮನೆ ಕಟ್ಟಬಾರದು.

ಜಾತ್ರೆಗಳು.

೫೨. ಲೋಕಲ್‌ಬೋರ್ಡ ಆ್ಯಕ್ಟ ಕಲಂ ೬೨ರ ಪ್ರಕಾರ ಬೋರ್ಡಿನವರು ಮಂಜೂರ ಮಾಡಿದ ಪೋಟ ಕಾಯಿದೆಗಳನ್ನು ಪಂಚಾಯತ ಹದ್ದಿನಲ್ಲಿಯ ಜಾತ್ರೆಗಳಿಗೆ ಲಾಗು ಅವೆ.

ಸಂತೆಯ ಮತ್ತು ವ್ಯಾಪಾರದ ಸ್ಥಳಗಳು.

೫೩. ಪಂಚಾಯತ ಕಮಿಟಿಯು ನಿರ್ದಿಷ್ಟಪಡಿಸಿದ ಸ್ಥಳಗಳಲ್ಲಿ ಮಾತ್ರ ವಾರದ ಸಂತೆಯು ನಡೆಯತಕ್ಕದ್ದು. ಅಂಥ ಸಂತೆಯ ದಿವಸ

ಗಳಲ್ಲಿ ಸದರ ಜಾಗೆ ಬಿಟ್ಟು ಬೇರೆ ಕಡೆಗೆ ಯಾರೂ ಹಂಗಾಮಿ ಅಂಗಡಿ ಹಚ್ಚಕೂಡದು.

೫೪. ಸಂತೆಯ ಸ್ಥಳದಲ್ಲಿಯ ರಸ್ತೆಗಳಲ್ಲಿ ತನ್ನ ಅಥವಾ ಗಿರಾಕಿಗಳ ಉಪಯೋಗದ ಸಲುವಾಗಿ ಪೆಟ್ಟಿಗೆ ಅಥವಾ ಇತರ ಜಿನಸುಗಳನ್ನು ಇಟ್ಟು ರಸ್ತೆ ಅತಿಕ್ರಮಣ ಮಾಡಕೂಡದು.

೫೫. ದನಗಳನ್ನು ಮತ್ತು ಆಹಾರದ ಸಲುವಾಗಿ ಉಪಯೋಗಿಸುವ ಮಾಂಸ, ಮೀನ ಇವುಗಳ ಮಾರಾಟವನ್ನು ಪಂಚಾಯತಿಯವರು ಆ ಬಗ್ಗೆ ಗೊತ್ತುಪಡಿಸಿದ ಸ್ಥಳದ ಹೊರ್ತಾಗಿ ಬೇರೆ ಕಡೆಗೆ ಯಾರೂ ಮಾರಾಟ ಮಾಡಬಾರದು.

೫೬. ದೊಡ್ಡೀ ಸೋರುವ ಅಥವಾ ಕಟ್ಟದೆ ಇದ್ದ ಹುಣ್ಣುಗಳುಳ್ಳ ಅಥವಾ ಯಾವದಾದರೂ ರೋಗದಿಂದ ಪೀಡಿತರಾದಂಥ ಯಾವದೇ ಮನುಷ್ಯನು ಸಂತೆಗೆ ಅಥವಾ ಸಂತೆಯ ಹದ್ದಿನಲ್ಲಿ ಬರಕೂಡದು. ಬಂದರೆ ಸರಪಂಚನಾಗಲೀ ಅಥವಾ ಪಂಚಾಯತಿಯಿಂದ ನೇಮಿಸಲ್ಪಡುವ ಯಾವದೇ ಮನುಷ್ಯನಾಗಲೀ ಅವನನ್ನು ಹೊರಗೆ ಹಾಕಬಹುದು.

೫೭. ಯಾವದೇ ಮನುಷ್ಯನು ಶೆರೆ ಕುಡಿದದ್ದರೆ, ದುರ್ನಡತೆಯಿಂದ ವರ್ತಿಸುತ್ತಿದ್ದರೆ, ಅಥವಾ ಹುಚ್ಚನಿದ್ದರೆ, ಅಥವಾ ಗೊಂದಲ ಮಾಡುತ್ತಿದ್ದರೆ ಅಂಥವನನ್ನು ಸಂತೆಯ ಹದ್ದಿನಿಂದ ಹೊರಗೆ ಹಾಕಬಹುದು. ಮತ್ತು ಮುಂದೆ ಅವನು ಅಲ್ಲಿ ಏನೊಂದು ವ್ಯವಹಾರ ಮಾಡುವದಕ್ಕೆ ಹರಕತ್ತು ಮಾಡಬಹುದು.

೫೮. ಸಂತೆಯ ಹದ್ದಿನಲ್ಲಿಯ ಅಂಗಡಿಗಳ ವ ಇಮಾರತಿಗಳ ಮಾಲಕನು ತನ್ನ ಮನೆ ಅಂಗಡಿಗಳನ್ನು ಪಂಚಾಯತಿಯವರು ನಿರ್ದಿಷ್ಟ ಮಾಡಿದ ವೇಳೆಯಲ್ಲಿ ಸರಿಯಾಗಿ ಕಸಹೊಡಿಸಿ ಸ್ವಚ್ಛ ಇಡಿಸತ

ಕ್ಕಷ್ಟು. ಬಾಕಿ ವೇಳೆಯಲ್ಲಿ ಮನೆ ಅಥವಾ ಅಂಗಡಿಗಳ ಕಸಾ ಹೊರಗೆ ಚಲ್ಲಕೂಡದು.

೫೯. ಪಂಚಾಯತಿಯ ಪ್ರತಿಯೊಬ್ಬ ಮೆಂಬರನಿಗೆ ಅಥವಾ ಪಂಚಾಯತಿಯಿಂದ ಕಳಿಸಲ್ಪಟ್ಟ ಅಧಿಕಾರಿಗೆ ಸಂತೆಯ ಸಲುವಾಗಿ ಉಪಯೋಗಿಸಲ್ಪಡುವ ಪ್ರತಿಯೊಂದು ಸ್ಥಳ ಅಥವಾ ಕಂದೂರಿಯ ಜಾಗೆಯ ತಪಾಸಣೆ ಮಾಡಲಿಕ್ಕೆ ಮುಕ್ತದ್ವಾರವಿರಬೇಕು.

ಕಂದೂರಿ ಸ್ಥಳಗಳು.

೬೦. ಪಂಚಾಯತಿಯವರು ಗೊತ್ತುಪಡಿಸಿದ ಸ್ಥಳದ ಹೊರ್ತಾಗಿ ಬೇರೆ ಕಡೆ ಯಾರೂ ಕಂದೂರಿ ಮಾಡತಕ್ಕದ್ದಲ್ಲ.

೬೧. ಜನರ ಅಹಾರಕ್ಕೆ ಉಪಯೋಗಿಸಲ್ಪಡುವ ಪ್ರಾಣಿಯನ್ನು ಪಂಚಾಯತಿಯವರು ಕಾಲಕಾಲಕ್ಕೆ ಗೊತ್ತುಪಡಿಸಿದ ವೇಳೆಯ ಹೊರ್ತು ಇತರ ವೇಳೆಯಲ್ಲಿ ಯಾರೂ ಕೊಯ್ಯತಕ್ಕದ್ದಲ್ಲ.

೬೨. ಆದೇ ದಿವಸ ಕಂದೂರಿ ಸುರುವು ಮಾಡುವ ಮೊದಲು ಸಂಪೂರ್ಣ ಸ್ವಚ್ಛ ಮಾಡದ ಮತ್ತು ಹದನ ಮಾಡದ ಚೂರಿಯನ್ನು ಯಾರೂ ಉಪಯೋಗಿಸತಕ್ಕದ್ದಲ್ಲ.

೬೩. ಪಂಚಾಯತಿಯವರು ಗೊತ್ತುಪಡಿಸಿದ ಪಾತ್ರೆಗಳ ಹೊರ್ತಾಗಿ ಬೇರೆ ಎಲ್ಲಿಯೂ ಕೊಯ್ಯುವ ಮನೆಯ ಕಸವನ್ನು ಚಲ್ಲ ತಕ್ಕದ್ದಲ್ಲ. ಮತ್ತು ರಕ್ತವನ್ನು ಹರಿಗೊಡತಕ್ಕದ್ದಲ್ಲ. ಮತ್ತು ಅಂಥ ಪಾತ್ರೆಗಳನ್ನು ಕಸಹಾಕಲಿಕ್ಕೆ ಅವಶ್ಯವಿದ್ದಕ್ಕಿಂತಾ ಹೆಚ್ಚು ಹೊತ್ತು ತೆರೆದಿಡತಕ್ಕದ್ದಲ್ಲ.

೬೪. ಕೊಯ್ಯುವ ಮನೆಯಲ್ಲಿರುವ ಕಂದೂರಿ ಮಾಡಿದ ಪ್ರಾಣಿಯ ತೊಗಲು, ಕೊಳೆತ ಮಾಂಸ, ವಗೈರೆಗಳನ್ನು ಕೊಯ್ಯುವ ಮನೆಯನ್ನು

ಮುಚ್ಚುವದರೊಳಗಾಗಿ ಒಯ್ಯದಿದ್ದರೆ ಅವು ಪಂಚಾಯತಿ ಮಾಲ್ಕಿಯಾಗುವವು.

೬೫. ಕೊಯ್ಯುವ ಮನೆಯಲ್ಲಿ ಹತ್ತು ವರ್ಷದೊಳಗಿನ ಹುಡುಗರನ್ನು ಯಾರೂ ಒಳಗೆ ಒಯ್ಯತಕ್ಕದ್ದಲ್ಲ, ಮತ್ತು ಒರಗೊಡತಕ್ಕದ್ದಲ್ಲ.

೬೬. ಯಾವನಾದರೂ ಶೆರೆಕುಡಿದಿರುವನೆಂದು, ಅಥವಾ ಕೆಟ್ಟ ರೀತಿಯಿಂದಾ ನಡೆಯುವನೆಂದು ಅಥವಾ ಹುಚ್ಚನಿರುವನೆಂದು ಕಂಡು ಬಂದರೆ ಪಂಚಾಯತಿಯು ಅಂಥವನನ್ನು ಕೊಯ್ಯುವ ಮನೆಯ ಸಮೀಪದಿಂದಾ ಹೊರಗೆ ಹಾಕಿಸಬಹುದು.

೬೭. ಕೂಡಲೆ ಕೊಯ್ಯಲಿರುವ ಪ್ರಾಣಿಗಳ ಹೊರ್ತಾಗಿ ಇತರ ಪ್ರಾಣಿಗಳನ್ನು ಕೊಯ್ಯುವ ಮನೆಯ ಒಳಗೆ ಬಿಡಬಾರದು.

ಚಕ್ಕಡಿ ಬಿಡುವ ಸ್ಥಳಗಳು.

೬೮. ಪಂಚಾಯತಿಯುವರು ಹಳ್ಳಿಯಲ್ಲಿ ಚಕ್ಕಡಿ ಬಿಡುವ ಜಾಗೆಯನ್ನು ಗೊತ್ತುಪಡಿಸಿದ್ದರೆ ಆ ಜಾಗೆಯನ್ನು ಬಿಟ್ಟು ಕಡೆಗೆ ರಸ್ತೆಯಿಂದ ಹತ್ತು ಫೂಟಿನೊಳಗಾಗಿ ಯಾರೂ ಚಕ್ಕಡಿ ಬಿಡತಕ್ಕದ್ದಲ್ಲ.

೬೯. ಅಯೋಗ್ಯ ಆಹಾರ ಮತ್ತು ಕುಡಿಯುವ ಸಾಮಾನದ ತಪಾಸಣಿ ಮಾಡುವ ಬಗ್ಗೆ ಮತ್ತು ಅವುಗಳನ್ನು ನಾಶ ಮಾಡುವ ಸಂಬಂಧ ನೇಮುಗಳು.

ಜನರು ತಿನ್ನುವ ಮತ್ತು ಕುಡಿಯುವ ಸಾಮಾನಗಳ ಪ್ರತಿಯೊಬ್ಬ ವ್ಯಾಪಾರಿಯು ಸರಪಂಚನಿಗೆ ಅಥವಾ ಪಂಚಾಯತಿಯಿಂದ ಈ ಸಂಬಂಧಿ ನೇಮಿಸಲ್ಪಟ್ಟ ಮನುಷ್ಯನಿಗೆ ಯಾವತ್ತೂ ಯೋಗ್ಯ ಹೊತ್ತಿನಲ್ಲಿ ತನ್ನ ಮನೆ ಅಥವಾ ಅಂಗಡಿಯಲ್ಲಿ ಪ್ರವೇಶಿಸಲಿಕ್ಕೆ ಪರವಾನಗಿ ಕೊಡತಕ್ಕದ್ದು. ಮತ್ತು ಆ ಸ್ಥಳದ ವ ಮಾರಾಟಕ್ಕೆ ಇಟ್ಟ ಆಹಾರದ

ಯಾವತ್ತೂ ಸಾಮಾನುಗಳನ್ನು, ಕೂಡಿಟ್ಟ ಪಾತ್ರೆಗಳನ್ನು ತಪಾಸ ಮಾಡಲಿಕ್ಕೆ ಎಲ್ಲಾ ಅನುಕೂಲತೆಗಳನ್ನು ಒದಗಿಸಿಕೊಡತಕ್ಕದ್ದು. ಮತ್ತು ಈ ಪ್ರಕಾರ ತಪಾಸಣಿಗೆ ಬಂದವರು ಸ್ವಚ್ಛತೆ ಬಗ್ಗೆ ಮಾಡಿದ ಯಾವತ್ತೂ ಅಪ್ಪಣೆಗಳನ್ನು ಕೂಡಲೇ ಪಾಲಿಸತಕ್ಕದ್ದು.

೭೦. ಕಸಕು ಅಥವಾ ಅತಿಶಯ ಮಾಗಿದ ಹಣ್ಣುಗಳನ್ನು ಅಥವಾ ಕೊಳೆಯಲಾದ ಕಾಯಿಪಲ್ಲೆಗಳನ್ನು ಯಾರಿಗಾದರೂ ಮಾರಗೊಡಬಾರದು. ಅನಾರೋಗ್ಯಕರ ಆಹಾರದ ಸಾಮಾನುಗಳ ಮಾರಾಟವನ್ನು ಪಂಚಾಯತಿಯವರು ಬಂದುಮಾಡಬಹುದು ಮತ್ತು ಅಂಥ ಸಾಮಾನುಗಳನು ಕೂಡಲೆ ನಾಶಪಡಿಸತಕ್ಕದ್ದು.

೭೧. ಊರ ಸ್ವಚ್ಛತೆ ಸಂಬಂಧಿ ಸಾಮಾನ್ಯ ನೇಮಗಳು.

ಪಂಚಾಯತಿಯವರು ಗೊತ್ತುಪಡಿಸಿದ ಸ್ಥಳಗಳ ಹೊರ್ತಾಗಿ ರಸ್ತೆ ಮೇಲೆ ಅಥವಾ ಇತರ ಕಡೆಗೆ ಯಾರೂ ಧೂಳ, ಬೂದಿ, ತೋಟ, ಅಡಿಗೆಮನೆ, ದನದ ಮನೆಯ ಕಸ ಅಥವಾ ಇದರ ಯಾವದೇ ಹೊಲಸು ಚಲ್ಲತಕ್ಕದ್ದಲ್ಲ.

೭೨. ಗಟಾರದ ನೀರು ಮತ್ತು ಮಲ ಅಥವಾ ಬಚ್ಚಲಹರಿ ನೀರನ್ನು ಯಾರೂ ರಸ್ತೆ ಮೇಲೆ ಬಿಡತಕ್ಕದ್ದಲ್ಲ.

೭೩. ಪಂಚಾಯತಿಯ ಪರವಾನಿಗಿ ಇಲ್ಲದೆ ಉಪಯೋಗಿಸತಕ್ಕದ್ದಲ್ಲ.

೭೪. ಯಾವದೊಂದು ಮನೆಯ ಅಥವಾ ಭೂಮಿಯ ಮಾಲಕನು ಅಥವಾ ಭೋಗವಟೇದಾರನು ಅದನ್ನು ಮತ್ತು ಅದರ ಆಜೂಬಾಜು ಆರೋಗ್ಯಕ್ಕೆ ಅಪಾಯವಾಗುವಂತೆ ಹೊಲಸು ಇಡತಕ್ಕದ್ದಲ್ಲ.

೭೫. ಪಂಚಾಯತಿಯವರು ಗೊತ್ತುಪಡಿಸಿದ ಸ್ಥಳವನ್ನು ಬಿಟ್ಟು ನೆರೆಯವರಿಗೆ ಅಥವಾ ದಾರಿಕಾರರಿಗೆ ಅಸಹ್ಯವಾಗುವಂತೆ ಯಾರೂ

ಪ್ರಾಣವಧೆ, ಪಿಂಡ ಅಥವಾ ಚರ್ಮ ತೊಳಿಯೋಣ, ಮಲಮೂತ್ರ ವಿಸರ್ಜನೆಗೆ ಕೂಡೋಣ ಮಗುವನ್ನು ಕೂಡ್ರಿಸೋಣ ಮತ್ತು ರಸ್ತೆಯಲ್ಲಿ ಅಥವಾ ಹತ್ತರ ಜನರಿಗೆ ಕಾಣುವಂತೆ ಸ್ನಾನ ಮಾಡಬಾರದು.

ಸರ್ವ ಸಾಮಾನ್ಯ ನಿಯಮಗಳು.

೭೬. ಯಾವನಾದರೂ ಪೋಟ ಕಾಯದೆ ೧೭ರಿಂದ ೭೫ರ ವರೆಗೆ ಪೋಟ ಕಾಯದೆಯ ಯಾವದಾದರೂ ಕಟ್ಟಳೆಯನ್ನು ಮುರಿದರೆ ಅವನು ಅಂಥ ಪ್ರತಿಯೊಂದು ತಪ್ಪಿಗೆ ಶಿಕ್ಷೆ ಆದ ಪಕ್ಷದಲ್ಲಿ ಹತ್ತು ರೂಪಾಯಿಗೆ ಮೀರದಷ್ಟು ದಂಡಕ್ಕೆ ಪಾತ್ರನಾಗುವನು. ಅಥವಾ ಉಲ್ಲಂಘನವು ಹಾಗೇ ಸಾಗಿದರೆ ಮೊದಲನೇ ಉಲ್ಲಂಘನೆಗೆ ಶಿಕ್ಷೆ ಹೊಂದಿದ ನಂತರ ಮಾಡಿದ ಉಲ್ಲಂಘನೆಗೆ ಅದು ಹಾಗೆ ಸಾಗಿರುವ ವರೆಗೆ ಪ್ರತಿದಿವಸ ಒಂದು ರೂಪಾಯಿಗೆ ಮೀರದಷ್ಟು ದಂಡಕ್ಕೆ ಪಾತ್ರನಾಗುವನು.

೭೭. **ಲೋಕಲ್‌ಬೋರ್ಡಿನವರು ಕೆಲಸಕ್ಕೆ ಹಚ್ಚಿದ ಕೂಲಿಕಾರರ ಮೇಲ್ವಿಚಾರಣೆ** ಗ್ರಾಮದೊಳಗಿನ ಕಾಮಗಿರಿಗಳ ಸಲುವಾಗಿ ಲೋಕಲ್‌ಬೋರ್ಡಿನವರು ಹಚ್ಚಿದ ಕೂಲಿಯವರ ಮೇಲ್ವಿಚಾರಣೆಗೆ ಪಂಚಾಯತಿಯವರು ಪ್ರತಿವರ್ಷ ಅವಶ್ಯವಿದ್ದಲ್ಲಿ ಒಂದು ವರ್ಕ್ಸ್ (ಕೆಲಸಗಳ) ಕಮೀಟಿಯನ್ನು ನೇಮಿಸಬಹುದು.

೭೮. ಗ್ರಾಮಪಂಚಾಯತಿಯವರು ಅಥವಾ ವರ್ಕ್ಸ್ ಕಮಿಟಿ ಇದ್ದರೆ ಅವರು ಜಿಲ್ಹಾ ಲೋಕಲ್‌ಬೋರ್ಡಿನ ಅಥವಾ ತಾಲೂಕ ಬೋರ್ಡಿನ ಯಾವನಾದರೂ ಪಗಾರಿ ಅಥವಾ ಆನರರಿ ಅಧಿಕಾರಿಯು ಕೇಳಿದ ಪಕ್ಷದಲ್ಲಿ.

(ಅ) ಕಾಮಗಾರಿಗಳ ಸಲುವಾಗಿ ಕೂಲಿಯವರನ್ನು, ಕಾಮಗಿರಿ ಸ್ಥಳಗಳಿಗೆ ಯೋಗ್ಯ ದರದಿಂದಾ ಸಾಮಾನು ಒಯ್ಯುಲಿಕ್ಕೆ ಚಕ್ಕಡಿಗಳನ್ನು ಕೊಡತಕ್ಕದ್ದು.

(ಬ) ಕಾಮಗಿರಿಯು ಸರಿಯಾಗಿ ನಡೆಯುವಂತೆ ದೇಖರೇಕಿ ಇಡಬೇಕು.

(ಕ) ಮಕ್ತೆ ಕೊಟ್ಟ ಕೆಲಸಗಳನ್ನು ತಪಾಸ ಮಾಡಿ ಕುಂದು ಕೊರತೆಗಳೇನಾದರೂ ಇದ್ದರೆ ಜಿಲ್ಹಾ ಲೋಕಲ್‌ಬೋರ್ಡ ಕಾಮಗಿರಿ ಸಂಬಂಧಿ ಬೋರ್ಡ ಇಂಜನಿಯರ ಸಾಹೇಬರವರಿಗೆ ತಾಲೂಕ ಲೋಕಲ್‌ಬೋರ್ಡ ಕಾಮಗಿರಿ ಸಂಬಂಧಿ ಪ್ರೆಸಿಡೆಂಟ ತಾ|| ಲೋ|| ಬೋರ್ಡಿಗೆ ರಿಪೋರ್ಟ ಮಾಡತಕ್ಕದ್ದು.

೭೯. ಗ್ರಾಮದೊಳಗಿನ ಧರ್ಮಶಾಲೆಯು ಪಂಚಾಯತಿಯ ತಾಬಾದಲ್ಲಿಯೇ ಇರಲಿ ಅಥವಾ ಲೋಕಲ್‌ಬೋರ್ಡ ತಾಬಾದಲ್ಲಿಯೇ ಇರಲಿ ಅದು ವ್ಯವಸ್ಥಿತ ರೀತಿಯಲ್ಲಿರುವಂತೆ ನೋಡುವದು ಪಂಚಾಯತಿಯ ಕರ್ತವ್ಯವು. ಧರ್ಮಶಾಲೆಯು ಲೋಕಲ್‌ಬೋರ್ಡಿನ ತಾಬಾದಲ್ಲಿದ್ದರೆ ಅದಕ್ಕೆ ಏನೇನೂ ರಿಪೇರಿ ಬೇಕಾಗಿವೆ ಎಂದನ್ನು ಪಂಚಾಯತಿಯವರು ಲೋಕಲ್‌ಬೋರ್ಡಿನವರಿಗೆ ತಿಳಿಸತಕ್ಕದ್ದು.

೮೦. ಪಂಚಾಯತಿ ಇದ್ದ ಊರುಗಳಲ್ಲಿ ಕೊಂಡವಾಡೆ ಆ್ಯಕ್ಟ ಪ್ರಕಾರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕರ್ತವ್ಯಗಳು ಪಂಚಾಯತಿ ಕಡೆಗೆ ಹಾಕಲ್ಪಟ್ಟಿವೆ. ಕೊಂಡವಾಡೆಯು ದುರಸ್ತಿಯಲ್ಲಿರುವಂತೆ ನೋಡಿಕೊಳ್ಳುವದು ಪಂಚಾಯತಿಯ ಕರ್ತವ್ಯವು.

೮೧. ಪೋಲೀಸ ಪಾಟೀಲ ಇದ್ದವನು ಕೊಂಡವಾಡೆ ದೊಡ್ಡಿದಾರನಾಗುವನು. ಪೋಲೀಸ ಪಾಟೀಲನು ಸರಪಂಚ ಅಥವಾ ಪಂಚಾಯತಿ ಮೆಂಬರ ಇದ್ದರೆ ಪಂಚಾಯತಿಯವರು ಬೇರೆ ಮನುಷ್ಯನನ್ನು ದೊಡ್ಡಿದಾರ ಕೆಲಸಕ್ಕೆ ನೇಮಿಸಬಹುದು. ಮತ್ತು ಹಾಗೆ ನೇಮಿಸಿದವನನ್ನು ಸಸ್ಪೆಂಡ ಮಾಡಬಹುದು ಮತ್ತು ತೆಗೆದುಹಾಕಬಹುದು.

೮೨. ದೊಡ್ಡಿದಾರನು ಕೂಡಿಸಿದ ಯಾವತ್ತೂ ದೊಡ್ಡಿ ದಂಡದ ಹಣವನ್ನು ಅದೇ ದಿವಸ ಸಂಜೆಗೆ ಅಥವಾ ಮರುದಿವಸ ಮುಂಜಾನೆ

ಒಂದು ಯಾದಿಯು ಎರಡು ಪ್ರತಿಗಳು ಸಹಿತ ಪಂಚಾಯತಿಗೆ ಕಳಿಸಿ ಕೊಡತಕ್ಕದ್ದು.

೮೩. ದೊಡ್ಡಿಯಲ್ಲಿ ಬಿದ್ದು ಬಿಡಿಸಿಕೊಂಡು ಹೋಗದ ಜನಾವರಗಳನ್ನು ಸರಪಂಚನು ಮತ್ತು ಅವನ ಗೈರಹಾಜರಿಯಲ್ಲಿ ಡಿಪುಟಿ ಸರಪಂಚನು ಲಿಲಾವ ಮಾಡತಕ್ಕದ್ದು.

೮೪. ಪಂಚಾಯತಿಯು ಒಂದು ಡಿಪಾಜಿಟ್ ರಜಿಸ್ಟರ ಇಡತಕ್ಕದ್ದು. ಜನಾವರ ಲಿಲಾವ ಮಾಡಿ ಬಂದ ಹಣವನ್ನು ಡಿಪಾಜಿಟ್ ರಜಿಸ್ಟರಕ್ಕೆ ಜಮಾ ತೆಗೆದುಕೊಳ್ಳತಕ್ಕದ್ದು.

೮೫. ಡಿಪಾಜಿಟ್ಟನಲ್ಲಿ ಇದ್ದ ಹಣದ ಸಂಬಂಧಿ ಸರಪಂಚನು ಒಂದು ನೋಟೀಸ ತೆಗೆದು ಯಾರಿಗಾದರೂ ಮಾಲ್ಕಿ ಸಿದ್ಧಮಾಡುವದಿದ್ದರೆ ನೋಟೀಸ ತಾರೀಖಿನಿಂದ ಮೂರು ತಿಂಗಳಲ್ಲಿ ಮಾಡತಕ್ಕದ್ದೆಂದು ತಿಳಿಸತಕ್ಕದ್ದು. ಮೂರು ತಿಂಗಳ ನಂತರ ಯಾರೂ ಹಣವನ್ನು ಬೇಡುವಂತೆ ಕಾಣದಿದ್ದರೆ ಪಂಚಾಯತಿ ಫಂಡಿಗೆ ಜಮಮಾಡಿಕೊಳ್ಳತಕ್ಕದ್ದು.

೮೬. ಮುದ್ದತಿಯಲ್ಲಿ ಯಾವನಾದರೂ ಮಾಲಿಕನು ಮುಂದೆ ಬಂದರೆ ಸರಪಂಚನು ಯೋಗ್ಯ ಚವಕಸಿ ನಂತರ ಮಾಲ್ಕಿ ಬಗ್ಗೆ ತನಗೆ ಖಾತ್ರಿ ಆನಿಸಿದರೆ ಪಂಚಾಯತಿ ಮಂಜೂರಿಯಿಂದಾ ಡಿಪಾಜಿಟ್ಟನಲ್ಲಿ ಇದ್ದ ಹಣವನ್ನು ಮಾಲಕನಿಗೆ ಕೊಡತಕ್ಕದ್ದು.

೮೭. ದೊಡ್ಡಿದಾರನು ಇಟ್ಟ ಯಾವತ್ತೂ ರಜಿಸ್ಟರ ಮತ್ತೂ ಲೆಖ್ಖ ಪತ್ರಗಳನ್ನು ಸರಪಂಚನು ತಪಾಸ ಮಾಡತಕ್ಕದ್ದು.

೮೮. ಪ್ರತಿ ತಿಂಗಳ ಕೊಂಡವಾಡೆಯ ಉತ್ಪನ್ನದ ನಾಲ್ಕರಲ್ಲೊಂದು ಭಾಗವನ್ನು ದೊಡ್ಡಿದಾರನ ಪಗಾರ ಮತ್ತು ರಜಿಸ್ಟರ ವಗೈರೆಂಡೋ ಬಗ್ಗೆ ಕೊಡತಕ್ಕದ್ದು. ಪೋಲೀಸ ಪಾಟೀಲ ದೊಡ್ಡಿದಾರನ

ವಾರ್ಷಿಕ ಪಗಾರ ೧೨೦ ರೂಪಾಯಿ ಮೀರತಕ್ಕದ್ದಲ್ಲಾ. ಮತ್ತು ಪಂಚಾಯತಿಯಿಂದ ನೇಮಿಸಲ್ಪಟ್ಟ ಸ್ಪೇಶಲ್ ದೊಡ್ಡಿದಾರನ ವಾರ್ಷಿಕ ಪಗಾರ ೧೮೦ ರೂಪಾಯಿ ಮೀರತಕ್ಕದ್ದಲ್ಲಾ.

೮೯. ಜಿಲ್ಹಾ ಲೋಕಲ್‌ಬೋರ್ಡಿನವರು ಪಂಚಾಯತಿಗೆ ಯಾವದಾದರೂ ಕಾಮಗಾರಿ ಮಾಡಿಸಲಿಕ್ಕೆ ಒಪ್ಪಿಸಿದ್ದರೆ ಪಂಚಾಯತಿಯವರು ಅದನ್ನು ದಿನಗೂಲಿ ಹಚ್ಚಿ ಮಾಡಿಸತಕ್ಕದ್ದು.

೯೦. ಕಾಮಗಾರಿ ಮೇಲ್ವಿಚಾರಣಿ ಬಗ್ಗೆ ಕಳಿಸಿದ ಸರಪಂಚ ಅಥವಾ ಪಂಚಾಯತಿ ಮೆಂಬರನು ಕೂಲಿಕಾರರ ಒಂದು ಹಾಜರಿ ಇಡತಕ್ಕದ್ದು. ಮತ್ತು ಅದನ್ನು ಪ್ರತಿದಿವಸ ಬರೆಯುತಕ್ಕದ್ದು. ಸರಪಂಚ ಅಥವಾ ಕಾಮಗಿರಿ ಮೇಲ್ವಿಚಾರಣೆಗೆ ನೇಮಿಸಿದ ಮೆಂಬರನು ಕೆಲಸಕ್ಕೆ ಹಚ್ಚಿದ ಕೂಲಿಕಾರರನ್ನು ತಾಳಿಮಾಡಿ ನೋಡತಕ್ಕದ್ದು. ಶಕ್ಯವಿದ್ದ ಪ್ರಸಂಗಗಳಲ್ಲಿ ಕೂಲಿಯವರು ಮಾಡಿದ ಕೆಲಸವನ್ನು ಅಳತೆಮಾಡಿ ಸರಪಂಚನ ಕಡೆಗೆ ಕೊಟ್ಟ ಎಷ್ಟಿಮೇಟಗಳಲ್ಲಿ ಕಾಣಿಸದ ಇಂಥಿಂಥ ಕೆಲಸಗಳು ಇಷ್ಟಿಷ್ಟು ಆಗಿರುವವೆಂದು ಕೂಲಿ ಜನರ ಹಾಜರಿಯಲ್ಲಿ ಬರೆಯತಕ್ಕದ್ದು.

೯೧. ಮಾಡಿದ ಎಲ್ಲ ಕಾಮಗಿರಿ ಮತ್ತು ತೆಗೆದುಕೊಂಡ ಯಾವತ್ತು ಸಾಮಾನು ಎಣಿಸತಕ್ಕದ್ದು ಅಳಿಯತಕ್ಕದ್ದಿದ್ದರೆ ಅಳಿಯುತಕ್ಕದ್ದು ಮತ್ತು ಅಂಥ ಅಳತೆ, ಮತ್ತು ಎಣಿಕೆಯನ್ನು ಜಿಲ್ಹಾ ಲೋಕಲ್‌ಬೋರ್ಡಿನವರು ಪಂಚಾಯತಿಗೆ ಕೊಟ್ಟ ಮಾಪಿನ ಪುಸ್ತಕ (ಮೇಜರಮೆಂಟ ಬುಕ್ಕಿನಲ್ಲಿ) ದಲ್ಲಿ ಬರೆಯುತಕ್ಕದ್ದು. ಸರಪಂಚ ಅಥವಾ ಪಂಚಾಯತಿ ಮೆಂಬರನು ಅಳತೆಗಳಿಗೆ ಸಂಕ್ಷಿಪ್ತ ಸಹಿ ಮಾಡತಕ್ಕದ್ದು.

೯೨. ಪಂಚಾಯತದ ಒಪ್ಪಿಗೆ ಇದ್ದರೆ ವಿಶಿಷ್ಟ ಪ್ರಸಂಗಗಳಲ್ಲಿ ಪಂಚಾಯತಿ ಮೇಲ್ವಿಚಾರಣೆಯಲ್ಲಿದ್ದ ಜಿಲ್ಹಾ ಲೋಕಲ್‌ಬೋರ್ಡ

ಮುದ್ರಕರು:- ಗೌಸಮೊಹಿಯುದ್ದೀನ ಬೀಡೀಕರ ಇವರು
ಧಾರವಾಡ ಆಬಿದಾ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು.

ಪ್ರಕಾಶಕರು:- ಜೆ. ಪಿ. ನಾಯಕ ಬಿ. ಎ. ಇವರು ತಮ್ಮ
ಧಾರವಾಡ ಆಫೀಸಿನಲ್ಲಿ ಪ್ರಸಿದ್ಧಪಡಿಸಿದರು.

ಪುಸ್ತಕ ದೊರೆಯುವ ಸ್ಥಳ:-

ರಾಮಾಶ್ರಯ ಬುಕ್ ಡಿಪೋ, ಮಾರ್ಕೆಟ ಧಾರವಾಡ

ABIDA PRINTING PRESS, DHARWAR